Mangalore Canarese Readers, New Series.

THE FIRST STANDARD READER

THIRD EDITION, REVISED

ಕನ್ನಡ ಮೊದಲನೆಯ ಪಾಠಕ



MANGALORE
BASEL MISSION BOOK AND TRACT DEPOSITORY
1906

Price: 2 As.] [ಕ್ರಯ: ೨ ಆಣೆ.

Mangalore Canarese Readers, New Series.

THE FIRST STANDARD READER

THIRD EDITION, REVISED

ಕನ್ನಡ ಮೊದಲನೆಯ ಪಾಠಕ

ಮೊದಲನೆಯ ದರ್ಜೆಯ ಉಪಯೋಗಾರ್ಥವಾದುದು.

MANGALORE

BASEL MISSION BOOK AND TRACT DEPOSITORY

1906

PRINTED AT THE BASEL MISSION PRESS, MANGALORE.

ಅನುಕ್ರಮಣಿಕೆ.

ಕನ್ನಡ ಮೊದಲನೆಯ ಪಾಠಕ.

1. ದೇವರು.

ನೀವು ಚಿಕ್ಕ ಮಕ್ಕಳು. ನಿಮ್ಮ ತಾಯಿತಂದೆಗಳು ನಿಮ್ಮನ್ನು ಸಾಕುತ್ತಾರೆ; ನಿಮಗೆ ಉಣ್ಣುವುದಕ್ಕೆ ಅನ್ನ ಕೊಡುತ್ತಾರೆ; ಉಡುವುದಕ್ಕೆ ಅರಿವೆ ಕೊಡುತ್ತಾರೆ; ನೀವು ಸಂಕಟದಲ್ಲಿ ಬಿದ್ದಾಗ ನಿಮ್ಮನ್ನು ನೋಡುತ್ತಾರೆ. ಅವರು ನಿಮ್ಮನ್ನು ಪ್ರೀತಿಸುವುದರಿಂದ ಹೀಗೆ ನಿಮ್ಮನ್ನು ಕಾಪಾಡುತ್ತಾರೆ.

ತಾಯಿತಂದೆಗಳಿಗಿಂತಲೂ ಹೆಚ್ಚಾಗಿ ದೇವರು ನಿಮ್ಮನ್ನು ಪ್ರೀತಿಸುತ್ತಾನೆ. ದೇವರು ನಮ್ಮನ್ನೂ ಮೃಗಪಕ್ಷಿಗಳನ್ನೂ ಗಿಡಬಳ್ಳಿಗಳನ್ನೂ ಉಂಟುಮಾಡಿದನು. ಆಕಾಶದಲ್ಲಿ ಸೂರ್ಯನನ್ನೂ ಚಂದ್ರನನ್ನೂ ಆತನೇ ನಿರ್ಮಿಸಿದನು. ನೀರಲ್ಲಿ ಮೀನುಗಳನ್ನು ಆತನೇ ಉಂಟುಮಾಡಿದನು.

ದೇವರು ನಮ್ಮನ್ನು ಬಹಳ ಪ್ರೀತಿ ಮಾಡುತ್ತಾನೆ. ನಮಗೆ ಮಾತಾಡುವ ಶಕ್ತಿಯನ್ನು ಕೊಟ್ಟನು; ಇದು ಒಳ್ಳೆಯದು, ಅದು ಕೆಟ್ಟದು ಎಂದು ತಿಳಿದುಕೊಳ್ಳುವುದಕ್ಕೆ ನಮಗೆ ಬುದ್ಧಿ ಕೊಟ್ಟಿದ್ದಾನೆ; ನಮಗೆ ಕೇಡು ಆಗದ ಹಾಗೆ ಹಗಲು ಇರುಳು ನಮ್ಮನ್ನು ಕಾಪಾಡುತ್ತಾನೆ. ದೇವರು ತಂದೆಯಂತೆ ನಮ್ಮನ್ನು ಪ್ರೀತಿಸುತ್ತಾನೆ. ನಾವು ದೇವರನ್ನು ಪ್ರೀತಿಸತಕ್ಕದ್ದು.

೨. ದನ.



ಇದು ದನ. ಅಗೋ, ಅಲ್ಲಿ ಅದರ ಕರು ಇದೆ. ದನದ ಒಂದು ಮಗ್ಗುಲಲ್ಲಿ ಒಬ್ಬ ಹೆಂಗುಸು ಇದ್ದಾಳೆ. ಇವಳ ಕೈಯಲ್ಲಿ ಒಂದು ತಂಬಿಗೆ ಇದೆ. ಇವಳು ಏನು ಮಾಡುತ್ತಾಳೆ? ಈ ಹೆಂಗುಸು ಹಾಲು ಕರೆಯುತ್ತಾಳೆ. ಇವಳು ಹಾಲು ಮಾರುವವಳು. ಅಲ್ಲಿ ನೋಡು! ಒಬ್ಬ ಹುಡುಗನು ಹಾಲಿಗೆ ಬಂದಿದ್ದಾನೆ.

ನಾವು ಹಾಲನ್ನು ಕುಡಿಯುತ್ತೇವೆ. ಅದು ರುಚಿಯಾಗಿದೆ. ಹಾಲನ್ನು ಕಾಸಿ, ಹೆಪ್ಪು ಹಾಕಿ, ಮೊಸರು ಮಾಡುವರು. ಮೊಸರನ್ನು ಕಡೆದರೆ, ಬೆಣ್ಣೆ ಬರುತ್ತದೆ. ಮೊಸರನ್ನು ಕಡೆಯುವ

ಕೋಲಿಗೆ ಕಡಗೋಲು ಎನ್ನುವರು ಮೊಸರಿನಿಂದ ಬೆಣ್ಣೆಯನ್ನು ತೆಗೆದರೆ, ಮಜ್ಜಿಗೆ ಉಳಿಯುವುದು. ಬೆಣ್ಣೆಯನ್ನು ಒಲೆಯ ಮೇಲಿಟ್ಟು ಕರಗಿಸಿದರೆ, ತುಪ್ಪವಾಗುವುದು. ಹಣವಂತರು ಮೊಸರನ್ನು ಅನ್ನಕ್ಕೆ ಬಡಿಸಿಕೊಂಡು ಉಣ್ಣುತ್ತಾರೆ. ಬಡವರು ಮಜ್ಜಿಗೆನೀರು ಕಲಸಿಕೊಂಡು ಉಣ್ಣುವರು.

ಈ ಗೌಳಿಗಿತ್ತಿಯು ದನವನ್ನು ಪ್ರೀತಿಯಿಂದ ಸಾಕುತ್ತಾಳೆ. ಅದಕ್ಕೆ ಹಿಂಡಿಯನ್ನೂ ಕಾಳನ್ನೂ ಇಡುತ್ತಾಳೆ. ದನವನ್ನು ಕರೆಯುವ ಮುಂಚೆ ಅದಕ್ಕೆ ಹಿಂಡಿ ಬೆರಸಿ ಗಂಜಿ ಇಡುವಳು. ಚಿತ್ರದಲ್ಲಿ ನೋಡು! ದನಕ್ಕೆ ಮರಿಗೆಯಲ್ಲಿ ತಿನ್ನುವುದಕ್ಕೆ ಇಟ್ಟಿದೆ. ದನವನ್ನು ಕರೆದ ಮೇಲೆ ಮೇವುಬಳ್ಳಿ ಹಾಕಿ ಹೊರಗೆ ಕಟ್ಟುವಳು. ಅಲ್ಲಿ ಅದು ಹುಲ್ಲು ಮೇಯುವುದು. ರಾತ್ರಿಯಲ್ಲಿ ದನವನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹುಲ್ಲು ಹಾಕುವಳು.

ದನದ ತಲೆಯ ಮೇಲೆ ಎರಡು ಕೋಡುಗಳಿವೆ, ನೋಡು! ನೀನು ಅದನ್ನು ಸುಮ್ಮನೆ ಹೊಡೆದರೆ, ಅದು ಕೊಂಬುಗಳಿಂದ ನಿನ್ನನ್ನು ಇರಿಯುವುದು. ನೀನು ಅದನ್ನು ಪ್ರೀತಿ ಮಾಡಿದರೆ, ಅದು ಪ್ರೀತಿಯಿಂದ ನಿನ್ನ ಕೈಯನ್ನು ನೆಕ್ಕುವುದು.

ದನಗಳನ್ನು ಸುಮ್ಮನೆ ನೋಯಿಸಬಾರದು. ಅವುಗಳನ್ನು ಹೊತ್ತುಹೊತ್ತಿಗೆ ಮೇವು ಹಾಕಿ ಅಕ್ಕರೆಯಿಂದ ಸಾಕಬೇಕು.

---

3. ಪಾಠಶಾಲೆಗೆ ಹೋಗುವುದು.



ಕಮಲ—ಅಮ್ಮಾ, ಸಾಲೆಗೆ ಹೊತ್ತಾಯಿತು; ನನಗೆ ತಲೆ ಬಾಚುವುದಿಲ್ಲವೇ?

ತಾಯಿ—ಏನೆ, ಇಷ್ಟು ಅವಸರ? ನೀನು ಜೆಡೆ ಬಿಚ್ಚಿ, ಎಣ್ಣೆ ಹಾಕಿಕೊಂಡು ಸಿಕ್ಕುಬಿಡಿಸು. ಈಗ ಬಂದೆ. ಈ ಹೊತ್ತು ನೀನು ಏಳುವಾಗಲೆ ತಡ ಮಾಡಿದೆ. ಜೆಡೆ ಕಟ್ಟುವುದಕ್ಕೆ ಈಗ ಆಗುವುದಿಲ್ಲ; ಮಗೂ, ತಲೆಗಂಟು ಹಾಕುತ್ತೇನೆ.

ಕಮಲ—ಅಮ್ಮಾ, ಆನಂದ ಎಲ್ಲಿದ್ದಾನೆ? ಅವನು ಈ ಹೊತ್ತು ನನ್ನೊಂದಿಗೆ ಸಾಲೆಗೆ ಬರುವುದಿಲ್ಲವೇ?

ತಾಯಿ—ಒಳಗೆ ಅಳುತ್ತಾ ನಿಂತಿದ್ದಾನೆ; ಅವನ ದೋತರ ಕೊಳಕಾಗಿದೆ; ಬೇರೆ ದೋತರ ಇಲ್ಲ.

ಕಮಲ—ಅಮ್ಮಾ, ಮೈಲಿಗೆ ಅರಿವೆಯನ್ನು ಉಟ್ಟುಕೊಂಡು ಬರಬಾರದೆಂದು ಉಪಾಧ್ಯಾಯರು ನಿನ್ನೆ ಹೇಳಿದರು. ಅವನಿಗೆ ಒಂದು ಇಜಾರನ್ನಾದರೂ ಉಡಿಸು.

ತಾಯಿ—ಇತ್ತ ಬಾ. ನಿನ್ನ ಪುಸ್ತಕಗಳು ಎಲ್ಲಿವೆ?

ಆನಂದ—ಪುಸ್ತಕ ಇಲ್ಲಮ್ಮಾ, ನಿನ್ನೆ ಒಳಗೆ ಹಲಗೆಯ ಮೇಲೆ ಇಟ್ಟಿದ್ದೆ; ಈಗ ಕಾಣುವುದಿಲ್ಲ.

ತಾಯಿ—ನಿನಗೆ ನೆನಪಿಲ್ಲ. ಮನೆಗೆ ಬಂದ ಮೇಲೆ ನೀನು ಪುಸ್ತಕವನ್ನು ಎಲ್ಲಿಯೋ ಹಾಕಿಬಿಡುತ್ತೀ. ಈಗ ಹುಡುಕಿ ತಾ.

ಕಮಲ—ಹಲಗೆಯ ಮೇಲೆ ಇಟ್ಟಿದ್ದೀಯಾ? ನಿನ್ನೆ ಸಾಲೆಯಿಂದ ಬಂದವನು ಪುಸ್ತಕಗಳನ್ನು ಮೂಲೆಗೆ ಬಿಸಾಡಿ ಆಡುವುದಕ್ಕೆ ಓಡಿದೆ. ಇಕೊ, ಇಲ್ಲಿವೆ.

ಈ ಪ್ರಕಾರವಾಗಿ ಮಾತುಗಳು ಆದ ಬಳಿಕ ಕಮಲೆಯೂ ಆನಂದನೂ ಸಾಲೆಗೆ ಹೊರಟರು. ಹೊತ್ತಾಯಿತೆಂದು ದಾರಿಯಲ್ಲಿ ನಿಲ್ಲದೆ, ಬೇಗ ಬೇಗನೇ ಹೆಜ್ಜೆ ಇಡುತ್ತಿದ್ದರು. ಆದರೂ ಅವರು ಮುಟ್ಟುವ ಮೊದಲೇ ಸಾಲೆಯಲ್ಲಿ ಹುಡುಗರು ಬಂದಿದ್ದರು. ಉಪಾಧ್ಯಾಯರು ಪಾಠ ಹೇಳಿಕೊಡುತ್ತಿದ್ದರು. ಅವರು ಕಮಲೆಯನ್ನು ನೋಡಿ—"ಏನೆ, ಕಮಲಾ? ಏಕೆ ಇಷ್ಟು ಹೊತ್ತಾಯಿತು?" ಎಂದು ಕೇಳಿದರು.

ಕಮಲ—ಅಯ್ಯಾ, ಆನಂದನು ತನ್ನ ಪುಸ್ತಕಗಳನ್ನು ಎಲ್ಲಿಯೋ ಹಾಕಿಬಿಟ್ಟಿದ್ದನು. ಸಾಲೆಗೆ ಹೊರಡುವಾಗ ಅವನ

ದೋತರದಲ್ಲಿ ತುಂಬ ಮಣ್ಣು ಇತ್ತು; ಇಜಾರನ್ನು ಉಡಿಸ ಬೇಕಾಯಿತು.

ಉಪಾಧ್ಯಾಯ—ಆನಂದಾ, ಪುಸ್ತಕವನ್ನೂ ಅರಿವೆಗಳನ್ನೂ ಇಡುವುದಕ್ಕೆ ಮನೆಯಲ್ಲಿ ಪ್ರತ್ಯೇಕ ಸ್ಥಳವನ್ನು ಗೊತ್ತುಮಾಡ ಬೇಕು. ಸಾಲೆಯಿಂದ ಮನೆಗೆ ಹೋದ ಕೂಡಲೆ ಅವನ್ನು ಅದೇ ಸ್ಥಳದಲ್ಲಿ ಇಡಬೇಕು. ಹಾಗೆ ಮಾಡಿದರೆ, ಅವು ನಿನಗೆ ಬೇಕಾ ದಾಗ ಸಿಕ್ಕುವುವು; ವಸ್ತ್ರಗಳು ಅಲ್ಲಿ ಇಲ್ಲಿ ಬಿದ್ದು ಕೊಳಕಾಗವು.

ಆನಂದ—ಅಯ್ಯಾ, ಇನ್ನು ಮುಂದೆ ಹಾಗೆಯೇ ಮಾಡು ತ್ತೇನೆ.

4. ಬತ್ತಕುಟ್ಟುವುದು.

ಇಲ್ಲಿ ಇಬ್ಬರು ಬತ್ತಕುಟ್ಟುತ್ತಾರೆ. ನೆಲದಲ್ಲಿ ಒರಳು ಇದೆ. ಅವರು ಬತ್ತವನ್ನು ಒರಳಲ್ಲಿ ಹಾಕಿ ಒನಕೆಯಿಂದ ಕುಟ್ಟುತ್ತಾರೆ.

ಬತ್ತಕ್ಕೆ ಸಿಪ್ಪೆಯು ಹತ್ತಿಕೊಂಡಿದೆ. ಒನಕೆಯು ಭಾರವಾ ಗಿದೆ. ಅದರ ತುದಿಯಲ್ಲಿ ಕಬ್ಬಿಣದ ಬಳೆ ಇದೆ. ಒನಕೆಯಿಂದ ಕುಟ್ಟುವಾಗ, ಸಿಪ್ಪೆಯು ನುರಿದು ಅಕ್ಕಿಯು ಬೇರೆಯಾಗುವುದು.

ಕುಟ್ಟಿದ ಬತ್ತವನ್ನು ಗೆರಸೆಯಲ್ಲಿ ಇಟ್ಟು ಗೇರಬೇಕು, ಅಥವಾ ಗಾಳಿಗೆ ಹಿಡಿದು ತೂರಬೇಕು. ಆಗ ಉಮಿಯು ಗಾಳಿಗೆ ಹಾರಿಹೋಗುವುದು; ಗೆರಸೆಯಲ್ಲಿ ಅಕ್ಕಿ ನಿಲ್ಲುವುದು. ಆ ಅಕ್ಕಿಯನ್ನು ಒಂದೆರಡು ಸಾರಿ ತೊಳಸುತ್ತಾರೆ. ಆಗ ತೌಡು ಸಹ ಹೋಗಿ ಅಕ್ಕಿಯು ಚೊಕ್ಕವಾಗುವುದು.




ಬತ್ತವನ್ನು ಕುಟ್ಟುವ ಮೊದಲು ಬೇಯಿಸಿ ಬಿಸಿಲಿಗೆ ಹಾಕಿ ಒಣಗಿಸುತ್ತಾರೆ. ಬತ್ತವನ್ನು ಬೇಯಿಸದೆ ಬಿಸಿಲಿಗೆ ಹಾಕಿ ಕುಟ್ಟುವುದೂ ಉಂಟು. ಬತ್ತವನ್ನು ಬೇಯಿಸದೆ ಕುಟ್ಟಿ ಮಾಡಿದ ಅಕ್ಕಿಗೆ ಬೆಳತಿಗೆ ಅಕ್ಕಿ ಎಂದು ಹೆಸರು. ಕುಚ್ಚಿಗೆ ಅಕ್ಕಿ ಎಂದರೆ ಬತ್ತವನ್ನು ಬೇಯಿಸಿ ಕುಟ್ಟಿ ಮಾಡಿದ ಅಕ್ಕಿ.

ಬತ್ತವನ್ನು ಬೇಯಿಸಿ ಕುಟ್ಟಬೇಕಾದರೆ, ಅದನ್ನು ಒಂದು ದಿನದ ವರೆಗೆ ನೀರಲ್ಲಿ ನೆನೆಹಾಕುತ್ತಾರೆ. ಆಗ ಬತ್ತವು ಬೇಗನೆ ಬೇಯುವುದು. ಬತ್ತವನ್ನು ಗಾಳಿಯಲ್ಲಿಯೂ ಬಿಸಿಲಿನಲ್ಲಿಯೂ ಒಣಗಿಸದಿದ್ದರೆ, ಕುಟ್ಟುವಾಗ ಮುದ್ದೆಯಾಗುವುದು. ಬತ್ತವು ಬಿಸಿಲಿಗೆ ಹದಮೀರಿ ಆರಿದರೆ, ಕುಟ್ಟುವಾಗ ಕಡಿಯಾಗುತ್ತದೆ.

ತೊಳಸಿ ಗೇರಿದ ಅಕ್ಕಿಯನ್ನು ಮುಡಿ ಕಟ್ಟುವರು. ಚಿತ್ರದಲ್ಲಿ ನೋಡು! ಒಬ್ಬನು ತಳುಹುಲ್ಲನ್ನು ಹಾಸಿ, ಅದರೊಳಗೆ ಅಕ್ಕಿಯನ್ನು ಸುರುವಿ, ಮುಡಿ ಕಟ್ಟುತ್ತಾನೆ. ಕಟ್ಟಿದ ಮುಡಿಗಳನ್ನು ಪೇಟೆಗೆ ತೆಗೆದುಕೊಂಡುಹೋಗಿ ಮಾರುವರು.

---

5. ಆಮೆಯೂ ಮೊಲವೂ.



ಒಂದು ದಿನ ಒಂದು ಆಮೆಯು ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟುಕೊಂಡು ಮೆಲ್ಲನೆ ನಡೆಯುತ್ತಿತ್ತು. ಅದನ್ನು ಒಂದು ಮೊಲವು ಕಂಡು ನಕ್ಕು—"ಅಣ್ಣಾ, ನೀನು ನಡೆಯುವುದರಲ್ಲಿ ಬಲು ಗಟ್ಟಿಗ; ನನ್ನೊಂದಿಗೆ ಪಂಥಹಾಕಿ ಓಡುತ್ತೀಯಾ?" ಎಂದು ಅಣಕಿಸಿತು. ಮೊಲವು ಚೇಷ್ಟೆ ಮಾಡುತ್ತದೆಂದು ಆಮೆಗೆ ತಿಳಿಯಿತು. ಅದು ಮೊಲವನ್ನು ನೋಡಿ—"ತಮ್ಮಾ, ನಾನು ನಿನ್ನಂತೆ ತ್ವರೆಯಾಗಿ ಓಡಲಾರೆ, ಆದರೂ ನಿನ್ನ ಜತೆಯಲ್ಲಿ ಓಡಿ ನೋಡುವೆನು" ಎಂದು ಉತ್ತರಕೊಟ್ಟಿತು. ಅದಕ್ಕೆ ಮೊಲವು—"ಹಾಗೋ, ಈಗಲೇ ಓಡೋಣ; ನನ್ನ ಕಾಲುಗಳ ವೇಗ

ವನ್ನು ನಿನಗೆ ತೋರಿಸುತ್ತೇನೆ" ಎಂದು ಹೇಳಿ ಓಡುವುದಕ್ಕೆ ಸೊಂಟಕಟ್ಟಿತು. ತರುವಾಯ ಎರಡೂ ಪಂಥಕಟ್ಟಿ ಓಡಿದುವು.

ಮುಂದಾಗಿ ಯಾವುದು ಮುಟ್ಟಿತು? ಆಮೆಯೊ, ಮೊಲವೊ? ಮೊಲವು ಬಲು ಬೇಗನೆ ಚಿಗಿದುಹೋಗುತ್ತದೆ. ಆಮೆಯು ನಿಧಾನವಾಗಿ ಹರಿಯುತ್ತದೆ. ಆದುದರಿಂದ ಮೊಲವು ಬೇಗನೆ ಚಿಗಿದುಕೊಂಡು ಓಡಿತು. ಅದು ಅರ್ಧ ದಾರಿಗೆ ಬಂದು, ಆಮೆಯನ್ನು ಹಿಂತಿರುಗಿ ನೋಡಿತು. "ಇದೇನು? ಈ ಮೊದ್ದು ಆಮೆಯು ಹಿಂದೆ ಬಿದ್ದಿದೆ. ನಾನು ಈಗಲೇ ಇಲ್ಲಿಂದ ಏಕೆ ಮುಂದೆ ಹೋಗಬೇಕು? ಇಲ್ಲಿ ಮರದ ನೆರಳಿದೆ. ತಂಪಿನಲ್ಲಿ ಬಿದ್ದುಕೊಂಡು, ಆಮೆಯು ಬರುವ ತನಕ ನಾನು ದಣುವಾರಿಸಿಕೊಳ್ಳುವೆನು" ಎಂದು ಹೇಳಿಕೊಂಡಿತು. ಹೀಗೆ ಹೇಳಿ ಮೊಲವು ಮರದ ಬುಡದಲ್ಲಿ ಮಲಗಿಕೊಂಡಿತು.

ಆಮೆಯು ಎಲ್ಲಿಯೂ ನಿಲ್ಲದೆ ಜಗ್ಗುಹಾಕುತ್ತಾ ಒಂದೇ ಸಮನಾಗಿ ನಡೆಯಿತು. ಅದು ಮೊಲವು ಮಲಗಿದ್ದ ಸ್ಥಳವನ್ನು ದಾಟಿ, ಗೊತ್ತು ಮಾಡಿದ ಸ್ಥಳಕ್ಕೆ ಮುಟ್ಟಿತು.


ಬಳಿಕ ಮೊಲವು ಎದ್ದು, ಬೇಗನೆ ಚಿಗಿದು ಮುಂದೆ ಹೋಯಿತು. ಆದರೆ ಆಮೆಯು ಮೊದಲೇ ಗುರಿಗೆ ಮುಟ್ಟಿ, ಪಂಥ ಗೆದ್ದಿತು.

ನಾವು ಆಮೆಯಂತೆ ಎಡೆಬಿಡದೆ ಕೆಲಸ ಮಾಡಬೇಕು. ಕೆಲಸವನ್ನು ನಿಧಾನವಾಗಿ ಮಾಡಿದರೂ, ಅದನ್ನು ಆಲಸ್ಯವಿಲ್ಲದೆ ಮಾಡಿದರೆ, ತಕ್ಕ ಹೊತ್ತಿಗೆ ಮುಗಿಸಬಹುದು. ನೀನು ಪಾಠ ಬರುವುದಿಲ್ಲವೆಂದು ಚಿಂತೆಪಡಬೇಡ. ಎಡೆಬಿಡದೆ

ಅಭ್ಯಾಸ ಮಾಡು. ಹಾಗೆ ಮಾಡಿದರೆ, ಬೇಗ ಪಾಠ ಬರುತ್ತ ದೆಂದು ಹಿಗ್ಗಿಕೊಂಡು ಕೆಲಸ ಮಾಡದ ಹುಡುಗರನ್ನೂ ನೀನು ಹಿಂದೆ ಹಾಕಬಹುದು.

---

6. ನಾಯಿ.



ಈ ನಾಯಿ ನಮ್ಮದು. ನಾನು ಅದನ್ನು ಮನೆಯಲ್ಲಿ ಸಾಕು ತ್ತೇನೆ. ನನ್ನ ಮೇಲೆ ಅದಕ್ಕೆ ಬಹಳ ಪ್ರೀತಿ. ನನ್ನನ್ನು ಕಂಡರೆ, ಬಾಲ ಅಲ್ಲಾಡಿಸುತ್ತಾ ಸಂತೋಷದಿಂದ ಹತ್ತಿರ ಬರುತ್ತದೆ; ನನ್ನ ಮೈಯನ್ನು ಮೂಸಿ ನೆಕ್ಕುತ್ತದೆ; ನಮ್ಮ ಮನೆಯವರನ್ನೂ ಕಂಡರೆ, ಹಾಗೆಯೇ ಮಾಡುತ್ತದೆ.

ನಾಯಿಯು ದನದಂತೆ ಹುಲ್ಲು ಮೇಯುವುದಿಲ್ಲ. ಅದರ ಹಲ್ಲುಗಳನ್ನು ನೋಡು, ಎಷ್ಟು ಚೂಪಾಗಿವೆ! ಈ ಹಲ್ಲುಗಳು ಮಾಂಸ ಕೀಳುವುದಕ್ಕೆ ನಾಯಿಗೆ ಬೇಕು. ಅದಕ್ಕೆ ಎಲುಬನ್ನು ಕಡಿಯುವುದು ಹೆಚ್ಚು ಇಷ್ಟ.

ನಾಯಿಗೆ ಬುದ್ಧಿ ಉಂಟು. ನಾನು ಎಲ್ಲಿ ಹೋದರೂ ಅದು ನನ್ನ ಹಿಂದೆಯೇ ಬರುವುದು. ನಾನು ಅಡಗಿಕೊಂಡರೆ, ನೆಲ

ವನ್ನು ಮೂಸಿ ನೋಡಿ, ನಾನು ಇದ್ದ ಸ್ಥಳವನ್ನು ತಿಳಿಯುವುದು. ಗುರುತು ಇಲ್ಲದವರನ್ನು ಕಂಡರೆ, ಅದು ಬೊಗಳುತ್ತದೆ; ಅವರನ್ನು ಮನೆಯೊಳಗೆ ಬರಗೊಡುವುದಿಲ್ಲ.

ನಾಯಿಗೆ ಬೇಗನೆ ನಿದ್ದೆ ಬೀಳುತ್ತದೆ. ಆದರೆ ಸ್ವಲ್ಪ ಸದ್ದು ಆಯಿತೆಂದರೆ, ಎಚ್ಚರವಾಗುವುದು; ಮತ್ತು ಕಿವಿ ನಿಗುರಿಸಿ, ನಾಲ್ಕು ಕಡೆಗೂ ನೋಡುವುದು. ಅದು ರಾತ್ರಿಯಲ್ಲಿ ಎಚ್ಚರವಾಗಿರುತ್ತದೆ; ಬಾಗಿಲಲ್ಲಿ ಮಲಗಿಕೊಂಡು ನಮ್ಮ ಮನೆಯನ್ನು ಕಾಯುವುದು. ಕಳ್ಳನು ಬಂದರೆ, ಅದು ತಿಳಿಯುತ್ತದೆ; ಮತ್ತು ಬೊಗಳಿ ಬೊಗಳಿ ಅವನನ್ನು ಕಚ್ಚುವುದಕ್ಕೆ ಹೋಗುತ್ತದೆ.

ಒಂದು ದಿನ ಒಬ್ಬ ಹುಡುಗನು ನಮ್ಮ ನಾಯಿಗೆ ಕಲ್ಲು ಎಸೆದನು. ಅದು ಅವನನ್ನು ಕಚ್ಚುವುದಕ್ಕೆ ಹಾರಿತು; ನಾನು ಅದನ್ನು ಕರೆದ ಕೂಡಲೆ ಅವನನ್ನು ಬಿಟ್ಟು ಹಿಂದೆ ಬಂತು. ಮರುದಿನ ಆ ಹುಡುಗನು ನಮ್ಮ ಮನೆಗೆ ಬಂದನು; ಆಗ ನಾನು ಮನೆಯಲ್ಲಿ ಇದ್ದಿಲ್ಲ. ಹುಡುಗನನ್ನು ಕಂಡು ನಾಯಿಯು ಗುರ್ರೆಂದು ಅವನ ಮೈಮೇಲೆ ಹಾರಿತು. ಅಂದಿನಿಂದ ಆ ಹುಡುಗನು ನಾಯಿಗಳಿಗೆ ಕಲ್ಲು ಎಸೆಯುವುದನ್ನು ಬಿಟ್ಟುಬಿಟ್ಟನು.

---

7. ಅಡಿಗೆ ಮಾಡುವುದು.

ಈ ಹೆಂಗುಸು ಅನ್ನ ಮಾಡುತ್ತಾಳೆ. ಅನ್ನ ಮಾಡುವುದಕ್ಕೆ ಮೊದಲು ಅಕ್ಕಿಯನ್ನು ತೊಳೆಯಬೇಕು. ಅಲ್ಲಿ ನೋಡು!



ಅವಳು ಅಕ್ಕಿಯನ್ನು ನೀರಲ್ಲಿ ಹಾಕಿ, ಚೆನ್ನಾಗಿ ತಿಕ್ಕಿ ತೊಳೆಯುತ್ತಾಳೆ.

ಪೇಟೆಯಲ್ಲಿ ಕೊಂಡುಕೊಂಡ ಅಕ್ಕಿಯಲ್ಲಿ ಸಣ್ಣ ಸಣ್ಣ ಕಲ್ಲುಗಳು ಇವೆ. ಹೆಂಗುಸು ಅಕ್ಕಿಯನ್ನು ನೀರಲ್ಲಿ ಹಾಕಿ ಕೈ ಆಡಿಸಿ, ಜಾಲಿಸಿ, ನೀರನ್ನು ಮತ್ತೊಂದು ಪಾತ್ರೆಗೆ ಹೊಯ್ಯುತ್ತಾಳೆ. ಹೀಗೆ ಎರಡು ಮೂರು ಸರ್ತಿ ತೊಳೆದರೆ, ತೌಡು ಹೋಗಿ ಅಕ್ಕಿಯು ಶುಚಿಯಾಗುತ್ತದೆ. ಬುಡದಲ್ಲಿ ನಿಂತ ಕಲ್ಲುಗಳನ್ನು ತೆಗೆದು ಬಿಸಾಡುತ್ತಾಳೆ. ಅಕ್ಕಿಯನ್ನು ತೊಳೆದ ನೀರಿಗೆ ಅಕ್ಕಚ್ಚು ಎಂದು ಹೆಸರು. ಇದನ್ನು ದನಕರಗಳಿಗೆ ಇಡುತ್ತಾರೆ.

ಅಲ್ಲಿ ನೋಡು! ಅನ್ನ ಮಾಡುವುದಕ್ಕೆ ಅವಳು ಒಲೆಯ ಮೇಲೆ ಎಸರು ಇಟ್ಟಿದ್ದಾಳೆ; ಒಲೆಯಲ್ಲಿ ಬೆಂಕಿ ಉರಿಯುತ್ತಿದೆ.

ನೀರು ಪಳಪಳನೆ ಕುದಿಯುತ್ತಲೇ ಅಕ್ಕಿಯನ್ನು ಪಾತ್ರೆಗೆ ಹಾಕು ತ್ತಾಳೆ; ಅಕ್ಕಿಯು ಬೇಯುವಾಗ ಸೌಟಿನಿಂದ ಮಗಚುತ್ತಾಳೆ. ಪಾತ್ರೆಯ ಮೇಲೆ ಸೌಟು ಇದೆ, ನೋಡು.

ಸ್ವಲ್ಪ ಹೊತ್ತಿನ ಮೇಲೆ ಕುದಿ ಬರುವುದು. ಆಗ ಅಕ್ಕಿ ಬೆಂದಿದೆಯೋ ಎಂದು ಸೌಟಿನಿಂದ ಅಗುಳು ತೆಗೆದು, ಬೆರಳು ಗಳಿಂದ ಒತ್ತಿ ನೋಡುತ್ತಾಳೆ. ಅನ್ನವನ್ನು ಹಾಗೆಯೇ ಒಲೆಯ ಮೇಲೆ ಬಿಟ್ಟುಬಿಟ್ಟರೆ, ಅದು ಬೆಂದು ಮುದ್ದೆಯಾಗುತ್ತದೆ.

ಹಾಳಿತವಾಗಿ ಬೆಂದ ಮೇಲೆ ಪಾತ್ರೆಯನ್ನು ಒಲೆಯಿಂದ ಎತ್ತಿ, ಮರಿಗೆಯ ಮೇಲೆ ಬಾಗಿ ಬಸಿಯುತ್ತಾಳೆ. ಆಗ ತಿಳಿಯು ಇಳಿದುಹೋಗಿ, ಅನ್ನವು ಪಾತ್ರೆಯಲ್ಲಿ ಉಳಿಯುತ್ತದೆ. ಬಸಿ ಯದೆ ತಿಳಿಯನ್ನು ಅನ್ನದಲ್ಲೇ ಬಿಡುವುದೂ ಉಂಟು; ಇದಕ್ಕೆ ಗಂಜಿ ಎಂದು ಹೆಸರು.

ಅಲ್ಲಿ ಬಟ್ಟಲುಗಳೂ ಗಿಂಡಿಗಳೂ ಕಾಣುತ್ತವೆ. ಅಡಿಗೆ ಯಾದ ಮೇಲೆ ಇವಳು ಮಕ್ಕಳಿಗೆ ಅನ್ನವನ್ನು ಬಡಿಸುತ್ತಾಳೆ. ಮಕ್ಕಳು ತಾಯಿ ಹೇಳಿದ ಹಾಗೆ ಕೇಳುತ್ತಾರೆ. ತಾಯಿ ಕರೆ ದಾಗ ಊಟಕ್ಕೆ ಕೂತುಕೊಳ್ಳುವರು. ಅವರು ಹೊತ್ತು ತಪ್ಪಿ ಊಟ ಮಾಡುವುದಿಲ್ಲ. ಹೊತ್ತು ತಪ್ಪದೆ ಊಟ ಮಾಡುವ ಹುಡುಗರು ಮೈಯಲ್ಲಿ ಸುಖವಾಗಿಯೂ ಚೆನ್ನಾಗಿಯೂ ಇರು ವರು.

---

8. ಕುರುಬನ ನಾಯಿ.



ಒಬ್ಬ ಕುರುಬನಲ್ಲಿ ಒಂದು ನಾಯಿ ಇತ್ತು. ಅವನು ದಿನಾಲೂ ಕುರಿಗಳನ್ನು ಗುಡ್ಡಕ್ಕೆ ಅಟ್ಟಿಕೊಂಡು ಹೋಗುತ್ತಿದ್ದನು. ಹೋಗುವಾಗ ತನ್ನ ನಾಯಿಯನ್ನು ಸಂಗಡ ಕರೆದುಕೊಂಡು ಹೋಗುತ್ತಿದ್ದನು.

ಒಂದು ದಿನ ಆ ಕುರುಬನ ಮಗನೂ ಸಂಗಡ ಬರುತ್ತೇನೆಂದು ಛಲ ಹಿಡಿದನು. ತಂದೆಯು ಅವನನ್ನು ಕರೆದುಕೊಂಡು ಹೋದನು. ಆ ಹುಡುಗನು ಚಿಕ್ಕವನು, ಮೂರೇ ವರ್ಷ ಪ್ರಾಯದವನು.

ಕುರುಬನು ಹುಡುಗನನ್ನೂ ನಾಯಿಯನ್ನೂ ಗುಡ್ಡದ ಬುಡದಲ್ಲಿ ನಿಲ್ಲಿಸಿದನು. ತಾನು ಗುಡ್ಡ ಹತ್ತಿ ಕುರಿಗಳ ಹಿಂದೆ ಹೋದನು.

ಸ್ವಲ್ಪ ಹೊತ್ತಿನ ಮೇಲೆ ಕತ್ತಲಾಯಿತು. ಆಕಾಶದಲ್ಲಿ ಮೋಡ ಮುಸುಕಿತು; ದೊಡ್ಡ ಮಳೆ ಬಂತು. ಆ ಹುಡುಗನು ಒದ್ದೆಮುದ್ದೆಯಾದನು. ಅವನು ಚಳಿಯಿಂದ ನಡುಗುತ್ತಾ ಒಂದು ಗವಿಯೊಳಗೆ ಹೋದನು. ಆ ಗವಿಯು ಗುಡ್ಡದ ಬುಡದಲ್ಲಿ ಇತ್ತು. ನಾಯಿಯು ಅವನ ಸಂಗಡಲೇ ಅದರೊಳಗೆ ಹೋಯಿತು.

ಕತ್ತಲಾದಾಗ ಕುರುಬನು ಗುಡ್ಡದ ಕೆಳಗೆ ಓಡಿಬಂದನು; ಮಗನು ಅಲ್ಲಿ ಇರಲಿಲ್ಲ. ಎದೆ ಬಡಕೊಂಡು ಸುತ್ತಮುತ್ತಲು ಅವನನ್ನು ಹುಡುಕಿದನು; ಆದರೆ ಮಗನನ್ನೂ ನಾಯಿಯನ್ನೂ ಕಾಣಲಿಲ್ಲ. ಅವನು ಮನೆಗೆ ಓಡಿದನು; ಅಲ್ಲಿಯೂ ಹುಡುಗನು ಇರಲಿಲ್ಲ. "ಅಯ್ಯೋ, ಮಗು ಏನಾಯಿತೋ!" ಎಂದು ಮನೆಯವರೆಲ್ಲರು ಗೋಳಾಡಿದರು.

ಮರುದಿನ ಬೆಳಗ್ಗೆ ನಾಯಿಯು ಮನೆಗೆ ಬಂತು. ಅದು ಬಹಳ ದಣಿದು ಬಿದ್ದುಕೊಂಡು, ನಾಲಗೆಯನ್ನು ಹೊರಕ್ಕೆ ಹಾಕಿ ತೇಕುತ್ತಿತ್ತು. ಮನೆಯವರು ಮಮತೆಯಿಂದ ಅದಕ್ಕೆ ಒಂದು ಚೂರು ರೊಟ್ಟಿ ಕೊಟ್ಟರು. ಅದು ರೊಟ್ಟಿಯನ್ನು ತಿನ್ನಲಿಲ್ಲ; ಅದನ್ನು ಕಚ್ಚಿಕೊಂಡು ಓಡಿಹೋಯಿತು.

ಕುರುಬನು ಆ ನಾಯಿಯ ಹಿಂದೆಯೇ ಓಡಿದನು. ಅದು ಒಂದು ಗವಿಯೊಳಗೆ ಹೊಕ್ಕಿತು. ಕುರುಬನೂ ಅದರೊಳಗೆ

ಹೋದನು. ಅವನ ಮಗನು ಅಲ್ಲಿ ರೊಟ್ಟಿ ತಿನ್ನುತ್ತಿದ್ದನು. ಕುರುಬನು ಮಗನನ್ನು ಅಪ್ಪಿಕೊಂಡು ಮುದ್ದಾಡಿದನು. ಅವನು ನಾಯಿಯನ್ನು ಮೈಬಳಚಿ ಮುದ್ದಾಡಿದನು. ಇಂಥಾ ಬುದ್ಧಿಯುಳ್ಳ ನಾಯಿಯನ್ನು ಯಾರು ಪ್ರೀತಿ ಮಾಡರು?

9. ಕೋಳಿ.



ಕೋಳಿಯನ್ನು ನೋಡಿದ್ದೀಯಾ? ಕೋಳಿಗೆ ರೆಕ್ಕೆಗಳಿವೆ. ರೆಕ್ಕೆಗಳು ಇದ್ದರೂ ಅದು ಬಹಳ ದೂರಕ್ಕೆ ಹಾರಲಾರದು; ಅದರ ಮೈ ಭಾರವಾಗಿದೆ. ಕೋಳಿಯು ಓಡಬಲ್ಲುದು; ಅದರ ಕಾಲುಗಳು ಬಲವಾಗಿವೆ. ಕಾಲಿಗೆ ಹಿಂದೆ ಒಂದು, ಮುಂದೆ ಮೂರು ಬೆರಳುಗಳಿವೆ. ಇವುಗಳಿಂದ ಅದು ನೆಲವನ್ನು ಕೆದರಿ, ಹುಳುಗಳನ್ನು ಹೆಕ್ಕಿ ತಿನ್ನುತ್ತದೆ.

ಕೋಳಿಯನ್ನು ಮನೆಗಳಲ್ಲಿ ಸಾಕುತ್ತಾರೆ. ಕಾಡಿನಲ್ಲಿಯೂ ಕೋಳಿಗಳಿವೆ. ಮನೆಯಲ್ಲಿ ಸಾಕುವ ಕೋಳಿಗೆ ಊರುಕೋಳಿ ಎಂದೂ, ಕಾಡಿನಲ್ಲಿ ಇರುವ ಕೋಳಿಗೆ ಕಾಡುಕೋಳಿ ಎಂದೂ ಹೆಸರು.

ಗಂಡುಕೋಳಿಗೆ ಹುಂಜ, ಹೆಣ್ಣುಕೋಳಿಗೆ ಹೇಂಟೆ ಎನ್ನುವರು. ಇಲ್ಲಿ ನೋಡು, ಈ ಹುಂಜವು ಎಷ್ಟು ಚೆಲುವಾಗಿದೆ! ತಲೆಯ ಮೇಲೆ ಜುಟ್ಟು ಇದೆ. ಜುಟ್ಟು ಕೆಂಪಗಿದೆ. ಬಾಲದಲ್ಲಿ ಉದ್ದವಾದ ಗರಿಗಳಿವೆ. ಅವುಗಳಲ್ಲಿ ತರತರದ ಬಣ್ಣಗಳಿವೆ. ಹೇಂಟೆಗೆ ಇರುವ ಜುಂಜು ಸಣ್ಣದು. ಅದರ ಬಾಲಕ್ಕೆ ಉದ್ದವಾದ ಗರಿಗಳೂ ಇಲ್ಲ. ಅದು ಹುಂಜದಷ್ಟು ಚೆಲುವಾಗಿಯೂ ಇಲ್ಲ, ಎತ್ತರವಾಗಿಯೂ ಇಲ್ಲ.

ಹೇಂಟೆಯು ಮೊಟ್ಟೆಗಳನ್ನು ಇಡುತ್ತದೆ; ಮತ್ತು ಮೊಟ್ಟೆಗಳ ಮೇಲೆ ಕೂತು ಕಾವು ಕೊಡುತ್ತದೆ. ಕೆಲವು ದಿನಗಳ ಮೇಲೆ ಮರಿಗಳು ಮೊಟ್ಟೆಯೊಡೆದು ಹೊರಗೆ ಬರುತ್ತವೆ. ಹೇಂಟೆಗೆ ಮರಿಗಳ ಮೇಲೆ ಪ್ರೀತಿ. ಅದು ಮರಿಗಳಿಗೆ ಮೇವನ್ನು ಹುಡುಕಿ ಕೊಡುತ್ತದೆ. ಅದರ ಮರಿಯನ್ನು ಹಿಡಿಯುವುದಕ್ಕೆ ಹೋಗು; ಅದು ಹಾರಿ ನಿನ್ನನ್ನು ಕುಕ್ಕುವುದಕ್ಕೆ ಬರುವುದು. ಗಿಡುಗನು ಮರಿಗಳನ್ನು ಹಿಡಿಯುವುದಕ್ಕೆ ಬಂದರೆ, ಹೇಂಟೆಯು ಕೊಕ್‍ಕೊಕ್ ಎಂದು ಕೂಗುತ್ತದೆ; ಕೂಡಲೆ ಮರಿಗಳು ಓಡಿ ಬಂದು ತಾಯಿಯ ಪಕ್ಕಗಳಲ್ಲಿ ಅಡಗಿಕೊಳ್ಳುತ್ತವೆ.

ಹುಂಜವು ಬೆಳಗಾಗುವುದಕ್ಕೆ ಮೊದಲು ಎಚ್ಚತ್ತು ಕೊಕ್‍ಕೊಕ್ ಕೋಕೋ ಎಂದು ಗಟ್ಟಿಯಾಗಿ ಕೆಲೆಯುವುದು. ಕೋಳಿಯ

ಕೂಗನ್ನು ಕೇಳುತ್ತಲೇ ಜನರು ತಟಕ್ಕನೆ ಎದ್ದು, ತಮ್ಮ ಕೆಲಸಗಳ ಮೇಲೆ ಹೋಗುವರು.

ಹುಂಜದ ಕಾಲಿಗೆ ಹದವಾದ ಚಿಕ್ಕ ಕತ್ತಿಗಳನ್ನು ಕಟ್ಟಿ, ಜೂಜಿಗೆ ಬಿಡುವುದು ಉಂಟು. ಇದರಲ್ಲಿ ಅನೇಕರು ಸಂತೋಷ ಪಡುತ್ತಾರೆ; ತಮ್ಮ ಹಣವನ್ನೂ ಸಮಯವನ್ನೂ ವೆಚ್ಚಮಾಡು ತ್ತಾರೆ. ಬಡ ಪ್ರಾಣಿಗಳನ್ನು ಹೀಗೆ ಪೀಡಿಸುವುದು ಕ್ರೂರತನ.

---

10. ಗಿಳಿ.

ಗಿಳಿಯು ನೋಟಕ್ಕೆ ಚಂದವಾದ ಪಕ್ಷಿ. ಅದು ಮರಗಳ ಹೊಳ್ಳಿನಲ್ಲಿ ವಾಸಮಾಡುತ್ತದೆ. ಅದು ಮರದ ಮೇಲೆ ಕೂತು ಕೊಂಡರೆ ಫಕ್ಕನೆ ಕಣ್ಣಿಗೆ ಬೀಳುವುದಿಲ್ಲ; ಅದರ ಬಣ್ಣವು ಮರದ ಎಲೆಗಳಂತೆ ಹಸುರಾಗಿದೆ. ಗಿಳಿಯ ಚುಳ್ಳಿ ಮಾತ್ರ ಕೆಂಪಾಗಿದೆ.

ಗಿಳಿಯ ಕಾಲುಗಳನ್ನು ನೋಡು! ಅದರ ಕಾಲಿಗೆ ಮುಂದೆ ಎರಡು, ಹಿಂದೆ ಎರಡು ಬೆರಳುಗಳು ಇವೆ; ಅದಕ್ಕೆ ಕೋಳಿಯಂತೆ ನೆಲದ ಮೇಲೆ ಚೆನ್ನಾಗಿ ನಡೆಯುವುದಕ್ಕೆ ಬರುವುದಿಲ್ಲ. ಅದು ಬೆರಳುಗಳಿಂದ ಮರದ ರೆಂಬೆಗಳನ್ನು ಬಿಗಿಯಾಗಿ ಹಿಡಿದುಕೊಳ್ಳು ವುದು; ಅವುಗಳಿಂದ ಕಾಯಿಗಳನ್ನು ಬಿಮ್ಮಗೆ ಹಿಡಿದುಕೊಳ್ಳುವು ದಕ್ಕೂ ಆಗುತ್ತದೆ. ಗಿಳಿಯು ಕಾಯಿಗಳನ್ನೂ ಗಟ್ಟಿಯಾದ ಬೀಜಗಳನ್ನೂ ಒಡೆದು ತಿನ್ನುವುದು. ಅದರ ಮೋತಿಯು ಗಟ್ಟಿ



ಯಾಗಿಯೂ ಹರಿತವಾಗಿಯೂ ಇದೆ. ಅದು ಪ್ರೀತಿಯಿಂದ ನಿನ್ನ ಕೈಬೆರಳನ್ನು ಕಚ್ಚಿದರೆ, ಗಾಯವಾಗುವುದು.

ಗಿಳಿಯನ್ನು ಮರಿ ಇರುವಾಗಲೇ ಹಿಡಿದು, ಪಂಜರದಲ್ಲಿಟ್ಟು ಸಾಕುತ್ತಾರೆ. ಮಾತು ಕಲಿಸಿದರೆ, ಅದು ಬೇಗನೇ ಕಲಿಯುತ್ತದೆ. ಗಿಳಿಗಳು ಕಲಿತ ಮಾತುಗಳನ್ನು ಆಡುತ್ತವೆ; ಆದರೆ ಮಾತುಗಳ ಅರ್ಥವೇನೆಂದು ತಿಳಿದುಕೊಳ್ಳಲಾರವು. ಕೆಲವು ಹುಡುಗರು ಅರ್ಥ ತಿಳಿಯದೆ ಗಿಳಿಯಂತೆ ಪಾಠಗಳನ್ನು ಕಲಿಯುವರು. ಅರ್ಥ ತಿಳಿಯದೆ ಪಾಠಗಳನ್ನು ಹೇಳುವುದಕ್ಕೆ ಜನರು ಗಿಳಿಪಾಠ ಎನ್ನುವರು. ನೀನು ಅರ್ಥವನ್ನು ತಿಳಿಯದೆ ಪಾಠ ಹೇಳಬೇಡ. ಮೊದಲು ಪಾಠದ ಅರ್ಥವನ್ನು ತಿಳಿಯುವುದಕ್ಕೆ ಯತ್ನಿಸು.

---

11. ಕಸ ಬಳಿಯುವವನು.

ಇವನು ಕಸ ಬಳಿಯುವ ರಾಮು; ರಸ್ತೆಯಲ್ಲಿರುವ ಕಸವನ್ನು ಗುಡಿಸಿ ತೆಗೆಯುತ್ತಾನೆ. ಮಾರ್ಗದ ಮೇಲೆ ತರಗೆಲೆ,



ಸಗಣಿಮುದ್ದೆ, ಕಸಕಡ್ಡಿ ಬಿದ್ದು ಹೊಲಸು ಆಗುತ್ತದೆ. ರಾಮು ಬೆಳಗ್ಗೆ ಎದ್ದು ಬರಗೋಲಿನಿಂದ ಕಸವನ್ನು ಉಡುಗಿ, ರಸ್ತೆಯನ್ನು ಚೊಕ್ಕ ಮಾಡುತ್ತಾನೆ. ಅವನಿಗೆ ತಿಂಗಳಿಗೆ ಐದು ರೂಪಾಯಿ ಸಂಬಳ ಸಿಕ್ಕುತ್ತದೆ. ರಾಮು ಈ ಹಣದಿಂದ ಜೀವನ ಮಾಡುತ್ತಾನೆ.

ಅಲ್ಲಿ ಕೂತಿರುವ ಹುಡುಗನು ಅವನ ಮಗನು. ತಂದೆಗೆ ಇವನ ಮೇಲೆ ಬಹಳ ಪ್ರೀತಿ. ಹುಡುಗನು ಒಳ್ಳೆಯವನು; ಕಸ ಉಡುಗುವುದರಲ್ಲಿ ತಂದೆಗೆ ಸಹಾಯ ಮಾಡುತ್ತಿದ್ದಾನೆ; ಅವನು ಬಾವಿಯಿಂದ ನೀರು ತರುತ್ತಾನೆ. ಅಲ್ಲಿ ಕೊಡವಿದೆ, ನೋಡು. ತಂದೆಯು ಕಸ ಉಡುಗಿದ ಮೇಲೆ, ಈ ಹುಡುಗನು ರಸ್ತೆಗೆ

ನೀರು ಚಿಮಿಕಿಸುತ್ತಾನೆ. ನೀರು ತಳಿಸಿದರೆ, ರಸ್ತೆಯಿಂದ ದೂಳು ಹಾರುವುದಿಲ್ಲ. ಹುಡುಗನು ರಾಮು ಹೇಳಿದ ಹಾಗೆ ನಡೆದುಕೊಳ್ಳುತ್ತಾನೆ. ರಾಮು ಕಸ ಉಡುಗಿ ಒಂದು ಕಡೆಯಲ್ಲಿ ರಾಶಿ ಹಾಕುವನು. ಹುಡುಗನು ಅದನ್ನು ಬುಟ್ಟಿಯಲ್ಲಿ ತುಂಬಿ ದೂರಕ್ಕೆ ಒಯ್ಯುವನು.

ಕಸವನ್ನು ಮಾರ್ಗದಲ್ಲೇ ಬಿಟ್ಟರೆ, ಅದು ಬೇಗನೆ ಕೊಳೆಯುತ್ತದೆ. ಕೊಳೆತ ಮೇಲೆ ನಾತ ಹುಟ್ಟುತ್ತದೆ; ಇದು ನಮ್ಮ ಆರೋಗ್ಯಕ್ಕೆ ಕೆಡುಕು.


ನೀನು ಮನೆಯನ್ನೂ ಅಂಗಳವನ್ನೂ ಶುಚಿಯಾಗಿ ಇಡಬೇಕು. ಮನೆಯ ಸಂದುಮೂಲೆಯಲ್ಲಿ ಕಸವನ್ನು ಇರಗೊಡಿಸಬಾರದು. ಅಂಗಳದಲ್ಲಿ ಸೊಪ್ಪುಸದೆ ಬಿದ್ದರೆ, ಅದನ್ನು ಉಡುಗಿ ದೂರ ಬಿಸಾಡು. ನಿನ್ನ ಮೈಯು ಯಾವಾಗಲೂ ನಿರ್ಮಲವಾಗಿ ಇರಬೇಕು. ಆಗ ರೋಗವು ನಿನಗೆ ದೂರವಾಗುವುದು.

---

12. ಮುದ್ದು ಗಿಳಿ.

ರಂಗನಲ್ಲಿ ಒಂದು ಗಿಳಿ ಇತ್ತು. ಅವನು ಅದನ್ನು ಒಂದು ಗೂಡಿನಲ್ಲಿ ಇಟ್ಟು ಸಾಕುತ್ತಿದ್ದನು. ಅದಕ್ಕೆ ತಿನ್ನುವುದಕ್ಕೆ ಬೀಜಗಳನ್ನೂ ಹಣ್ಣುಗಳನ್ನೂ ಕೊಡುತ್ತಿದ್ದನು. ಒಂದೊಂದು ಸಾರಿ ರಂಗನು ಗೂಡಿನ ಬಾಗಿಲನ್ನು ತೆರೆದು ಗಿಳಿಯನ್ನು ಕೈಯಲ್ಲಿ ಎತ್ತಿಕೊಳ್ಳುತ್ತಿದ್ದನು. ಗಿಳಿಗೆ ರಂಗನ ಮೇಲೆ ಪ್ರೀತಿ; ಅದು ಅವನ ಬೆರಳನ್ನು ಕಚ್ಚುತ್ತಿರಲಿಲ್ಲ.

ರಂಗನ ತಂದೆಯು ಗಿಳಿಗೆ ಮಾತು ಕಲಿಸಿದ್ದನು. ಬೆಳಗಾಗುತ್ತಲೇ ಗಿಳಿಯು—"ರಂಗಾ, ರಂಗಾ, ಬೆಳಗಾಯಿತು; ಬೇಗನೆ




ಏಳು, ಪುಸ್ತಕವನ್ನು ತೆಗೆ, ಶಾಲೆಗೆ ನಡೆ" ಎಂದು ಮಾತಾಡುವುದು. ಕೂಡಲೇ ರಂಗನು ಎಚ್ಚರವಾಗಿ, ಮೋರೆ ತೊಳೆದುಕೊಂಡು, ಸಾಲೆಗೆ ಹೋಗುವನು. ಅವನು ಪ್ರತಿದಿನವೂ ಸಾಲೆಯಿಂದ ಬಂದ ಮೇಲೆ ಗಿಳಿಗೆ ಮೇವು ಕೊಡುತ್ತಿದ್ದನು.

ಒಂದು ದಿನ ರಂಗನು ಪಾಠಶಾಲೆಯಲ್ಲಿ ಪೆಟ್ಟು ತಿಂದು, ಅಳುತ್ತಾ ಮನೆಗೆ ಬಂದನು. ಆ ದಿವಸ ಗಿಳಿಗೆ ಯಾರೂ ಅನ್ನ ಇಡಲಿಲ್ಲ. ಮರು ದಿನ ಬೆಳಗ್ಗೆ ರಂಗನು ನೆರೆಮನೆಯ ಮಕ್ಕಳ ಸಂಗಡ ಆಡುವುದಕ್ಕೆ ಹೋದನು. ಆ ದಿನ ಅವನು ಆಡುವುದರಲ್ಲಿಯೇ ಮುದ್ದು ಗಿಳಿಯನ್ನು ಮರೆತುಬಿಟ್ಟನು. ಮೂರನೆಯ ದಿವಸ ರಂಗನು ಕೆಲವು ಹಣ್ಣುಗಳನ್ನು ಹಿಡಿದುಕೊಂಡು, ಗಿಳಿಯ ಪಂಜರದ ಹತ್ತಿರ ಹೋದನು. ಗಿಳಿಯು ಕಣ್ಣು ಮುಚ್ಚಿತ್ತು; ಅದರ ತಲೆ ಓರೆಯಾಗಿತ್ತು; ಅದು ಆಹಾರವಿಲ್ಲದೆ ಸತ್ತು ಹೋಗಿತ್ತು. ರಂಗನು ಅದನ್ನು ನೋಡಿ ಬಿಕ್ಕಿಬಿಕ್ಕಿ ಅತ್ತನು. ಆ ದಿನ ಅವನು ಯಾರೊಡನೆ ಆಡುವುದಕ್ಕೂ ಹೋಗಲಿಲ್ಲ,

ಮಕ್ಕಳಿರಾ, ನೀವು ಸಾಕುವ ಹಕ್ಕಿಗಳಿಗೆ ಮೇವು ಕೊಡುವುದಕ್ಕೆ ಮರೆಯಬೇಡಿರಿ!

13. ಆನೆ.



ನೆಲದ ಮೇಲೆ ಬದುಕುವ ಎಲ್ಲಾ ಮೃಗಗಳಲ್ಲಿ ಆನೆಯು ದೊಡ್ಡದು. ಅದರ ಮೈ ಬಹಳ ದಪ್ಪ, ಬಣ್ಣ ಕಪ್ಪು, ಕಣ್ಣುಗಳು ಬಲು ಚಿಕ್ಕವು; ಕಿವಿಗಳು ಮೊರಗಳ ಹಾಗೆ ಅಗಲವಾಗಿವೆ; ಕಾಲುಗಳು ಕಂಬಗಳಂತೆ ನೆಟ್ಟಗೂ ದಪ್ಪವಾಗಿಯೂ ಇವೆ.

ಆನೆಗೆ ಒಂದು ಹೆಚ್ಚಿನ ಅವಯವವು ಉಂಟು; ಅಂಥಾ ಅವಯವವು ಬೇರೆ ಯಾವ ಮೃಗಕ್ಕೂ ಇಲ್ಲ. ಅದು ಯಾವುದು ಎಂದು ಬಲ್ಲಿರಾ? ಅದು ಸೊಂಡಿಲು. ನಮಗೆ ಕೈ ಹೇಗೋ ಹಾಗೆಯೇ ಆನೆಗೆ ಸೊಂಡಿಲು. ಅದು ಸೊಂಡಿಲಿನಿಂದ ಮರದ ಕೊಂಬೆಗಳನ್ನು ಮುರಿಯುತ್ತದೆ; ಮೇವನ್ನು ಬಾಯೊಳಗೆ ತಂದು ಇಡುತ್ತದೆ; ನೀರನ್ನು ಎತ್ತಿ ಬಾಯೊಳಗೆ ಸುರಿದು ಕೊಳ್ಳುತ್ತದೆ.

ಸೊಂಡಿಲಿನ ತುದಿಯಲ್ಲಿ ಸಣ್ಣದೊಂದು ಬೆರಳಿದೆ. ಇದರಿಂದ ಆನೆಯು ನೆಲದ ಮೇಲೆ ಇರುವ ಸೂಜಿಯನ್ನಾದರೂ ಹೆಕ್ಕಿ ತೆಗೆಯಬಲ್ಲುದು.

ಆನೆಗೆ ಈ ಹೆಚ್ಚಿನ ಅವಯವವು ಏಕೆ? ಆನೆಯು ಎತ್ತರವಾಗಿಯೂ ಅದರ ಕುತ್ತಿಗೆಯು ಗಿಡ್ಡವಾಗಿಯೂ ಇದೆ; ಇದರ ದೆಸೆಯಿಂದ ನೆಲದಲ್ಲಿರುವ ಮೇವನ್ನು ಎತ್ತಿಕೊಳ್ಳುವುದು ಅದಕ್ಕೆ ಕಷ್ಟ. ಆದುದರಿಂದ ದೇವರು ಆನೆಗೆ ಸೊಂಡಿಲನ್ನು ಕೊಟ್ಟಿದ್ದಾನೆ.


ಚಿತ್ರದಲ್ಲಿ ಕಾಣುವುದು ಗಂಡಾನೆ. ಅದರ ಬಾಯೊಳಗಿಂದ ಎರಡು ದಾಡೆಗಳು ಹೊರಟಿವೆ. ಇವಕ್ಕೆ ದಂತಗಳೆಂದು ಹೆಸರು. ಈ ದಾಡೆಗಳಿಂದ ಆನೆಯು ಗೆಡ್ಡೆ ಗೆಣಸುಗಳನ್ನು ಕಿತ್ತು ತಿನ್ನುತ್ತದೆ.

ಆನೆಗಳು ದೊಡ್ಡ ಕಾಡುಗಳಲ್ಲಿ ಹಿಂಡುಹಿಂಡಾಗಿರುವುವು. ಅವು ಹುಲ್ಲು, ಸೊಪ್ಪು, ಧಾನ್ಯ, ಹಣ್ಣು ಮುಂತಾದುವನ್ನು ತಿಂದು ಬದುಕುತ್ತವೆ.

ಜನರು ಕಾಡಾನೆಗಳನ್ನು ಹಿಡಿದು ಪಳಗಿಸುತ್ತಾರೆ. ಆನೆಯು ಬುದ್ಧಿಯುಳ್ಳ ಪ್ರಾಣಿಯಾಗಿದೆ; ಆನೆಗೆ ಬೇರೆ ಬೇರೆ ಕೆಲಸಗಳನ್ನು ಮಾಡುವುದಕ್ಕೆ ಕಲಿಸಬಹುದು.

ಆನೆಯನ್ನು ಸಾಕುವ ಆಳಿಗೆ ಮಾವಟಿಗನೆಂದು ಹೆಸರು. ಅದು ಅವನಿಗೆ ವಿಧೇಯವಾಗಿದೆ; ಅವನು ಹೇಳಿದಂತೆ ಕೇಳಿ ನಡೆಯುತ್ತದೆ.

14. ಎತ್ತು.



ರಾಮು—ರಂಗಾ, ಈ ಎತ್ತು ಎಷ್ಟು ಚೆಲುವಾಗಿದೆ, ನೋಡು! ಇದರ ಕೋಡುಗಳು ಹೇಗೆ ಚೂಪಾಗಿವೆ! ಹತ್ತಿರ ಹೋಗಬೇಡ. ಅದು ಕೊಂಬುಗಳಿಂದ ಇರಿದರೆ, ನಿನಗೆ ಗಾಯವಾಗಬಹುದು.

ರಂಗ—ಎತ್ತಿನ ಕೊರಳಪಟ್ಟೆ ಎಂದರೆ ಯಾವುದು, ನನಗೆ ತೋರಿಸುವೆಯಾ?

ರಾಮು—ತಮ್ಮಾ, ಅಲ್ಲಿ ನೋಡು, ಎತ್ತಿನ ಕುತ್ತಿಗೆಯ

ಕೆಳಗೆ ಇಳಿಬಿದ್ದು ನೇಲುವ ತೊಗಲು; ಇದೀಗ ಕೊರಳಪಟ್ಟೆ; ಇದಕ್ಕೆ ಗಂಗೆತೊಗಲು ಎಂದೂ ಹೇಳುವರು.

ರಂಗ—ಅಣ್ಣಾ, ನಮ್ಮ ದನಕ್ಕೆ ಕೊರಳಪಟ್ಟೆ ಇಲ್ಲ.

ರಾಮ—ಇಲ್ಲ ಎಂದೆನ್ನಕೂಡದು; ದನದ ಕೊರಳಪಟ್ಟೆಯು ಉದ್ದವಾಗಿ ಜೋಲಾಡುವುದಿಲ್ಲ.

ರಂಗ—ಅಣ್ಣಾ, ಎತ್ತಿನ ಭುಜ ಎಂದರೆ ಯಾವುದು?

ರಾಮ—ಅಲ್ಲಿ ನೋಡು, ಎತ್ತಿನ ಹೆಗಲ ಮೇಲೆ ಎತ್ತರವಾಗಿ ಇರುವ ಮಾಂಸದ ಡುಬ್ಬ; ಇದಕ್ಕೆ ಹಿಣಿಲು ಎಂತಲೂ ಹೇಳುವರು. ಒಳ್ಳೆಯ ಎತ್ತುಗಳಿಗೆ ದೊಡ್ಡ ಭುಜ ಉಂಟು; ಸಾಧಾರಣ ಎತ್ತಿಗೆ ಇಲ್ಲ.

ರಂಗ—ಈ ಎತ್ತು ಏಕೆ ಬಾಲವನ್ನು ಬೀಸುತ್ತಾ ಇದೆ, ಅಣ್ಣಾ?

ರಾಮ—ಅದು ಏಕೆಂದು ನಿನಗೆ ಗೊತ್ತಿಲ್ಲವೇ? ಅದರ ಮೈಮೇಲೆ ನೊಣಗಳು ಕೂತುಕೊಳ್ಳುತ್ತವೆ. ಅದು ಬಾಲವನ್ನು ಬೀಸಿ, ನೊಣಗಳನ್ನು ಓಡಿಸುತ್ತದೆ.

ರಂಗ—ತಿಳಿಯಿತು, ತಿಳಿಯಿತು; ದನಕರಗಳಿಗೆ ಬಾಲದಿಂದ ಒಳ್ಳೆಯ ಉಪಯೋಗ ಉಂಟು.

ರಾಮ—ಇದು ನಿನಗೆ ಈಗ ಮಾತ್ರ ತಿಳಿಯಿತೇ? ನೀನು ಯಾವುದನ್ನೂ ಕಣ್ಣಿಟ್ಟು ನೋಡಲೊಲ್ಲೆ, ಆಲೋಚಿಸಲೊಲ್ಲೆ. ಎತ್ತುಗಳಿಂದ ನಮಗೇನು ಪ್ರಯೋಜನ, ಹೇಳು.

ರಂಗ—ಎತ್ತುಗಳು ಬಂಡಿಯನ್ನು ಎಳೆಯುತ್ತವೆ, ಗದ್ದೆಯನ್ನು ಉಳುತ್ತವೆ, ಗಾಣವನ್ನು ತಿರುಗಿಸುತ್ತವೆ.

ರಾಮು—ಸರಿ, ಸರಿ; ಎತ್ತುಗಳಿಂದ ನಮಗೆ ಬಹಳ ಪ್ರಯೋಜನ ಉಂಟು. ಎತ್ತುಗಳಿಲ್ಲದೆ, ನಾವು ದೂರ ಪ್ರಯಾಣ ಮಾಡಲಾರೆವು; ಬೇಸಾಯ ಮಾಡುವುದಕ್ಕೂ ಉಪಾಯವಿಲ್ಲ. ಬೇಸಾಯ ಇಲ್ಲದಿದ್ದರೆ, ನಮಗೆ ಉಣ್ಣುವುದಕ್ಕೆ ಅನ್ನವೇ ದೊರೆಯದು. ಆದುದರಿಂದ ಎತ್ತುಗಳನ್ನು ಪ್ರೀತಿಯಿಂದ ಸಾಕಬೇಕು.

---

15. ನನ್ನ ತಾಯಿ.

(ಶರಷಟ್ಪದಿ.)

ಬಾಲಕನಾಗಿರೆ,
ಹಾಲನು ಕುಡಿಸುತ
ಪಾಲಿಸಿದವಳಾರ್? ನೀ ತಾಯೇ! ||
ಲಾಲಿಸಿ ನುಡಿಗಳ,
ಮೇಲಿನ ಮುತ್ತನು
ಲೀಲೆಯೊಳಿತ್ತವರಾರ್? ತಾಯೇ! ||

ಕೂಗುವ ಸಮಯದಿ
ತೂಗುತ ತೊಟ್ಟಿಲ
ಜೋಗುಳಿಸಿದರಾರ್? ನೀ ತಾಯೇ! ||
ರೋಗದಿ ತಲೆ ಬಿಸಿ-
ಯಾಗಿರೆ, ನಿದ್ದೆಯ
ನೀಗಿದಳಾರ್ರೈ? ನೀ ತಾಯೇ! ||

ಆಡುತಲಿರೆ ನಾ
ನೋಡದೆ ಬೀಳಲು,
ಓಡಿ ಹಿಡಿದಳಾರ್? ನೀ ತಾಯೇ! ||
ಆಡಲು ಸತ್ಯವ,
ಮಾಡಲು ಕೃತ್ಯವ
ಹಾಡಲು ಪದ ಕಲಿಸಿದೆ, ತಾಯೇ! ||

ಅಕ್ಕರೆ ನಿನ್ನಯ
ಮಕ್ಕಳ ಮೇಲೆಯೆ
ಸಕ್ಕರೆಗಿಂತಲು ಸವಿ, ತಾಯೇ! ||
ಲೆಕ್ಕಿಸಿ ಉಪಕಾ-
ರಕ್ಕುಪಕಾರವ
ತಕ್ಕಂತೆಯೆ ಮಾಡುವೆ, ತಾಯೇ! ||

---

16. ಹುಡುಗರೂ ಕಪ್ಪೆಗಳೂ.

ಒಂದು ದಿನ ದೊಡ್ಡ ಮಳೆ ಬಂತು. ಕೆರೆ ಬಾವಿಗಳಲ್ಲಿ ನೀರು ತುಂಬಿತು; ಹೊಳೆ ಹಳ್ಳಗಳಲ್ಲಿ ನೆರೆ ಬಂತು. ಸಾಲೆಗೆ ಬರುತ್ತಿದ್ದ ಹುಡುಗರು ಹೊಳೆ ದಾಟಲಾರದೆ ಮನೆಗೆ ಹಿಂದೆ ಹೋಗುತ್ತಿದ್ದರು.

ಮಾರ್ಗದ ಬದಿಯಲ್ಲಿ ಒಂದು ಕೆರೆ ಇತ್ತು. ಕೆರೆಯ ಮೆಟ್ಲು ಗಳಲ್ಲಿ ಕಪ್ಪೆಗಳು ಕೂತುಕೊಂಡು ಒದರುತ್ತಿದ್ದುವು. ಕಪ್ಪೆಗಳ ಗೊಂಕರನ್ನು ಕೇಳಿ, ಕೆಲವು ಮಂದಿ ಹುಡುಗರು ಕೆರೆಯ



ದಂಡೆಗೆ ಬಂದರು. ಇಬ್ಬರು ಕಲ್ಲು ತೆಗೆದುಕೊಂಡು ನೀರಿನ ಮೇಲೆ ಪುಟಿಸುತ್ತಾ ಆಡಹತ್ತಿದರು. ಅದನ್ನು ಕಂಡು ಉಳಿದವರೂ ಕಲ್ಲುಗಳನ್ನು ಎಸೆದರು.

ಕಲ್ಲುಗಳ ಪೆಟ್ಟು ತಗಲಿ ಕೆಲವು ಕಪ್ಪೆಗಳಿಗೆ ಗಾಯವಾಯಿತು. ಅದನ್ನು ಕಂಡು ಒಂದು ಮುದಿ ಕಪ್ಪೆಯು ಮುಂದೆ ಬಂದು—"ಅಪ್ಪಾ, ನೀವು ಕಲ್ಲು ಹೊಡೆದು ನಮ್ಮನ್ನು ಏಕೆ ಕೊಲ್ಲುವಿರಿ? ನೀವು ನೆಲದ ಮೇಲೆ ಇದ್ದೀರಿ, ನಾವು ನೀರಲ್ಲಿ ಇದ್ದೇವೆ; ನಿಮಗೆ ನಮ್ಮಿಂದ ಏನು ಕೇಡಾಯಿತು? ಅಯ್ಯೋ, ಏಕೆ ನಮ್ಮ ಮೇಲೆ ಕಲ್ಲು ಎಸೆಯುವಿರಿ?" ಎಂದು ಕೇಳಿತು.


ಅದಕ್ಕೆ ಒಬ್ಬ ಚಿಕ್ಕ ಹುಡುಗನು—"ನಾವು ನಿಮಗೆ ಕಲ್ಲು ಎಸೆಯಲಿಲ್ಲ, ಕಪ್ಪೆಯಾಟ ಆಡುತ್ತೇವೆ, ಅಷ್ಟೇ" ಎಂದನು.

ಆದಕ್ಕೆ ಆ ಮುದಿ ಕಪ್ಪೆಯು—"ಅಣ್ಣಾ, ಇದು ನಿಮಗೆ ಆಟ, ನಮಗೆ ಪ್ರಾಣಸಂಕಟ!" ಎಂದು ಹೇಳಿ ನೀರೊಳಗೆ ಹಾರಿತು.

ಈ ಮಾತನ್ನು ಕೇಳಿ ಇನ್ನೊಬ್ಬ ಹುಡುಗನು—"ಗೆಳೆಯರೇ, ಮನೆಗೆ ನಡೆಯಿರಿ, ನಾವು ಆಟಕ್ಕಾದರೂ ಯಾರನ್ನೂ ಪೀಡಿಸ ಬಾರದು" ಎಂದನು.

---

17. ಎಮ್ಮೆ ಮತ್ತು ಕೋಣ.



ಎಮ್ಮೆಯು ದನಕ್ಕಿಂತಲೂ ಬಲವುಳ್ಳದ್ದು. ಅದರ ಮೈ ಹಸುವಿನ ಮೈಗಿಂತಲೂ ದಪ್ಪ; ಕಾಲುಗಳು ದುಂಡಗಾಗಿಯೂ ಬಲವಾಗಿಯೂ ಇರುತ್ತವೆ. ಎಮ್ಮೆಯು ತಲೆಯನ್ನು ಬಾಗಿಸಿ ಕೊಂಡು ಮೆಲ್ಲಗೆ ನಡೆಯುತ್ತದೆ.

ಎಮ್ಮೆಯು ಹಸುವಿಗಿಂತ ಹೆಚ್ಚು ಹಾಲು ಕರೆಯುತ್ತದೆ. ಅದರ ಹಾಲಿನಿಂದ ಹೆಚ್ಚು ಬೆಣ್ಣೆ ಬರುತ್ತದೆ. ಆದರೆ ಎಮ್ಮೆಯ ಹಾಲಿಗಿಂತ ದನದ ಹಾಲೇ ಮಕ್ಕಳಿಗೆ ಒಳ್ಳೆಯದು; ಎಮ್ಮೆಯ ಹಾಲು ಬೇಗನೇ ಕರಗುವುದಿಲ್ಲ.

ಹೆಣ್ಣಿಗೆ ಎಮ್ಮೆ ಎಂದೂ ಗಂಡಿಗೆ ಕೋಣವೆಂದೂ ಹೆಸರು. ಕೋಣವು ಎತ್ತಿನಷ್ಟು ಚುರುಕಾಗಿ ಓಡುವುದಿಲ್ಲ; ಆದರೆ ಎತ್ತಿಗಿಂತಲೂ ಕಷ್ಟಪಟ್ಟು ಕೆಲಸ ಮಾಡುತ್ತದೆ. ಒಕ್ಕಲಿಗರು ಕೋಣಗಳನ್ನು ನೇಗಲಿಗೆ ಹೂಡಿ, ಗದ್ದೆಗಳನ್ನು ಉಳುತ್ತಾರೆ. ಕೆಲವು ಕಡೆಗಳಲ್ಲಿ ಕೋಣಗಳನ್ನು ಬಂಡಿಗೆ ಕಟ್ಟುತ್ತಾರೆ.

ಎಮ್ಮೆಗೂ ಕೋಣಕ್ಕೂ ಕೆಸರಿನಲ್ಲಿ ಹೊರಳುವುದು ಇಷ್ಟ. ಅವುಗಳು ತಲೆಯನ್ನು ಮೇಲಕ್ಕೆ ಎತ್ತಿ ನೀರಲ್ಲಿ ಬಿದ್ದುಕೊಳ್ಳುತ್ತವೆ.

ಎಮ್ಮೆ ಕೋಣಗಳು ದನ ಎತ್ತುಗಳಂತೆಯೇ ಹುಲ್ಲು, ತೌಡು, ಹಿಂಡಿ ಮೊದಲಾದುವನ್ನು ತಿನ್ನುತ್ತವೆ.

ಕಾಡುಗಳಲ್ಲಿ ಒಂದು ಬಗೆಯ ಕೋಣಗಳು ಹಿಂಡು ಹಿಂಡಾಗಿ ಅಲೆಯುತ್ತವೆ. ಅವು ವೇಗವಾಗಿ ಓಡುತ್ತವೆ. ಆ ಕಾಡುಕೋಣಗಳನ್ನು ಕಂಡರೆ, ಭಯವಾಗುವುದು. ಅವು ನಾಡು ಕೋಣಗಳ ಹಾಗೆ ಸಾಧುವಲ್ಲ. ನಾಡುಕೋಣವು ಸಾಧುವಾಗಿದೆ; ಆದರೆ ಕೋಪ ಬಂತು ಎಂದರೆ, ಅದು ತನ್ನ ಕೊಂಬುಗಳಿಂದ ಇರಿಯುವುದು.

18. ಸೂರ್ಯ.



ಸೂರ್ಯನು ಪೂರ್ವ ದಿಕ್ಕಿನಲ್ಲಿ ಮೂಡುತ್ತಾನೆ. ಸೂರ್ಯನು ಉದಯಿಸುವ ಕಾಲಕ್ಕೆ ಪ್ರಾತಃಕಾಲ ಎನ್ನುವರು. ಅವನು ಮುಳುಗುವ ಕಾಲಕ್ಕೆ ಸಾಯಂಕಾಲ ಎಂದು ಹೆಸರು. ಸೂರ್ಯನ ಬೆಳಕೇ ಬಿಸಿಲು.

ಸೂರ್ಯನಿಂದ ನಮಗೆ ಬೆಳಕೂ ಸೆಕೆಯೂ ಬರುತ್ತದೆ. ಸೂರ್ಯನು ಇಲ್ಲದಿದ್ದರೆ, ಎಲ್ಲವೂ ಕತ್ತಲಾಗುವುದು; ಒಡವೆ

ಗಳನ್ನು ನಾವು ಸರಿಯಾಗಿ ಕಾಣಲಾರೆವು; ಯಾವ ಕೆಲಸ ವನ್ನೂ ಮಾಡಲಾರೆವು.

ಬಿಸಿಲು ಕಾಯದಿದ್ದರೆ, ಮರಗಳು ಬೆಳೆಯಲಾರವು, ಹುಲ್ಲು ಚಿಗುರಲಾರದು. ಕಾಯಿ ಬಲಿತು ಹಣ್ಣಾಗುವುದಕ್ಕೆ ಬಿಸಿಲು ಬೇಕು.

ಸೂರ್ಯನು ಮೂಡುವುದಕ್ಕೆ ಸ್ವಲ್ಪ ಹೊತ್ತಿಗೆ ಮೊದಲು ಬೆಳಕು ಇರುವುದು; ಇದೇ ಮುಂಬೆಳಕು. ಸೂರ್ಯನು ಉದಯಿ ಸುವಾಗ, ಆ ಕಡೆಯಲ್ಲಿ ಆಕಾಶವು ಕೆಂಪಗಿದೆ. ಬೆಳಗ್ಗೆ ಸೂರ್ಯನ ಎಳೆಬಿಸಿಲು ಹೂಗಳ ಮೇಲೆ ಬಿದ್ದಾಗ, ಅಂದವಾಗಿ ತೋರು ವುದು.

ಸೂರ್ಯನು ಬಲು ದೂರದಲ್ಲಿ ಇದ್ದಾನೆ. ಅಷ್ಟು ದೂರ ದಲ್ಲಿ ಇದ್ದರೂ ಅವನ ಬಿಸಿಲಿನಿಂದ ನಮ್ಮ ಮೈಗೆ ಎಷ್ಟು ಸೆಕೆ ಯಾಗುತ್ತದೆ; ಹೂಗಳು ಕಂದಿಹೋಗುತ್ತವೆ. ಸೂರ್ಯನು ಹತ್ತಿರದಲ್ಲಿ ಇದ್ದದ್ದೇ ಆದರೆ, ಬಿಸಿಲು ಬಡೆದು ಎಲ್ಲವೂ ಸುಟ್ಟು ಹೋದೀತು. ಸೂರ್ಯನನ್ನು ನೋಡಿದರೆ, ಕಣ್ಣು ಕುಕ್ಕುತ್ತದೆ. ಅವನ ಜಳವು ಅಷ್ಟು ಹೆಚ್ಚಾಗಿದೆ.

ಸೂರ್ಯನು ಮುಳುಗಿದ ಕೂಡಲೇ ಕತ್ತಲು ಆಗುವುದಿಲ್ಲ; ಸ್ವಲ್ಪ ಹೊತ್ತು ಬೆಳಕು ನಿಲ್ಲುತ್ತದೆ. ಇದಕ್ಕೆ ಮುಂಗತ್ತಲು ಎಂದು ಹೆಸರು.

19. ಬಾವಿ.



ಇಗೋ, ಇದು ಒಂದು ಬಾವಿ. ಇದು ಸರಕಾರಿ ಬಾವಿ. ಊರಿನ ಜನರೆಲ್ಲರೂ ಈ ಬಾವಿಯಿಂದ ನೀರು ಸೇದಿಕೊಂಡು ಹೋಗಬಹುದು. ಅಲ್ಲಿ ನೋಡು! ನಾಲ್ಕು ಮಂದಿ ಹೆಂಗುಸರೂ ಒಬ್ಬ ಗಂಡುಸೂ ನಿಂತಿದ್ದಾರೆ. ಇವರು ನೀರು ಸೇದುವುದಕ್ಕೆ ಬಾವಿಯ ಬಳಿಗೆ ಬಂದಿದ್ದಾರೆ; ಗಡಿಗೆಗಳನ್ನೂ ಕೊಡಪಾನಗಳನ್ನೂ ತಂದಿದ್ದಾರೆ.

ಬಾವಿಯು ಆಳವಾಗಿದೆ. ನೀರು ಬಾವಿಯಿಂದ ಹೇಗೆ ಮೇಲೆ ಬರುತ್ತದೆ? ನೋಡು! ಕಂಬಗಳ ನಡುವೆ ಅಡ್ಡಮರಗಳು ಇವೆ; ಅವುಗಳಲ್ಲಿ ರಾಟೆ ಇದೆ. ಹೆಂಗುಸರು ರಾಟೆಯೊಳಗೆ ಹಗ್ಗ ಹಾಕಿ, ಹಗ್ಗದ ತುದಿಯಲ್ಲಿರುವ ಉರುಲನ್ನು ಕೊಡಪಾನಕ್ಕೆ ಸಿಕ್ಕಿಸುವರು; ಮತ್ತು ಕೊಡಪಾನವನ್ನು ಬಾವಿಯೊಳಕ್ಕೆ ಇಳಿಸಿ, ನೀರು ತುಂಬಿಸಿ ಮೇಲಕ್ಕೆ ಎಳೆಯುವರು.


ರಾಟೆ ಇಲ್ಲದೆ ದಂಡೆಮರದ ಮೇಲೆ ನಿಂತು ನೀರು ಸೇದಿಕೊಳ್ಳುವುದೂ ಉಂಟು. ಹೀಗೆ ನೀರು ಎತ್ತುವಾಗ ಬಹಳ ದಣುವಾಗುತ್ತದೆ. ನೀರು ಸೇದುವ ಜನರು ಆಗಾಗ್ಗೆ ಬಾವಿಯೊಳಗೆ ಜಾರಿ ಬೀಳುವುದೂ ಉಂಟು. ರಾಟೆಯಲ್ಲಿ ನೀರು ಸೇದುವುದು ಸುಲಭ, ಅಪಾಯವೂ ಇಲ್ಲ.

ಬಾವಿಯ ಒಳಕ್ಕೆ ಯಾರೂ ಫಕ್ಕನೆ ಬೀಳದ ಹಾಗೆ ಸುತ್ತಲೂ ಗೋಡೆ ಇಡುತ್ತಾರೆ. ಬಾವಿಯ ಸುತ್ತಲೂ ದಂಡೆ ಇದ್ದರೆ, ಹೊರಗಿನ ಕೊಳಕುನೀರು ಬಾವಿಯೊಳಗೆ ಹರಿಯುವುದಿಲ್ಲ. ಅಲ್ಲಿ ನೋಡು! ಈ ಬಾವಿಯ ಸುತ್ತಲು ಎಷ್ಟು ಚಂದವಾದ ಕಲ್ಲಿನ ಗೋಡೆ ಇದೆ!

ನಮಗೆ ಕುಡಿಯುವುದಕ್ಕೂ ಅಡಿಗೆ ಮಾಡುವುದಕ್ಕೂ ನೀರು ಬೇಕು. ನೀರಿಲ್ಲದೆ ಅರಿವೆಯನ್ನು ಒಗೆಯಲಾರೆವು, ಸ್ನಾನ ಮಾಡಲಾರೆವು. ಕುಡಿಯುವ ನೀರು ಯಾವಾಗಲೂ ಶುದ್ಧವಾಗಿರಬೇಕು. ಬಾವಿಯ ಬಳಿಯಲ್ಲಿ ಮರಗಳನ್ನು ಬೆಳೆಯಿಸಬಾರದು; ಬೆಳೆಯಿಸಿದರೆ, ಎಲೆಗಳು ಬಿದ್ದು ನೀರು ಕೊಳಕಾಗುವುದು. ನೀರಿನ ಮೇಲೆ ಸಾಕಷ್ಟು ಬಿಸಿಲು ಬೀಳಬೇಕು. ವರ್ಷ-

ವರ್ಷ ಕೆಸರು ತೆಗೆದು ಬಾವಿಯನ್ನು ಶುದ್ಧ ಮಾಡಬೇಕು. ಅಶುದ್ಧವಾದ ನೀರನ್ನು ಕುಡಿಯುವುದು ಆರೋಗ್ಯಕ್ಕೆ ಹಾನಿಕರ. ನೀರು ಕೊಳಕಾಗಿದ್ದರೆ, ಅದನ್ನು ಚೆನ್ನಾಗಿ ಕುದಿಸಿ ತಣಿಸಿ ಕುಡಿಯಬೇಕು. ಆಗ ರೋಗಗಳು ಹುಟ್ಟುವುದಿಲ್ಲ.

20. ಗೌಳಿಗನೂ ದನವೂ.



ಒಬ್ಬ ಗೌಳಿಗನಲ್ಲಿ ಒಂದು ದನ ಇತ್ತು. ಅದು ಹೊತ್ತಿಗೆ ಒಂದು ಕುತ್ತಿ ಹಾಲು ಕೊಡುತ್ತಿತ್ತು. ಅವನು ಆ ಹಾಲನ್ನು ಐದು ಆಣೆಗೆ ಮಾರಿ ಜೀವನ ಮಾಡುತ್ತಿದ್ದನು.

ಈ ಗೌಳಿಗನಿಗೆ ದುಡ್ಡಿನ ಆಸೆ ಹೆಚ್ಚು. ಅವನು ಕರುವಿಗೆ ಹಾಲು ಬಿಡದೆ, ದನವನ್ನು ಕರೆಯುತ್ತಿದ್ದನು; ಹಾಲಿಗೆ ನೀರು ಬೆರಸಿ ಮಾರುತ್ತಿದ್ದನು. ಹೀಗೆ ಮಾಡಿದರೂ ಅವನಿಗೆ ಹೆಚ್ಚು ಹಣ ಉಳಿಯಲಿಲ್ಲ.

ಅವನು ಒಂದು ದಿನ ಮನೆಯ ಜಗಲಿಯ ಮೇಲೆ ಕೂತು ಕೊಂಡು ಹೀಗೆ ಆಲೋಚಿಸಿದನು— "ದನದ ಕೆಚ್ಚಲಲ್ಲಿ ತುಂಬಾ

ಹಾಲಿದೆ. ಆದರೆ ದನವು ಹೊತ್ತಿಗೆ ಸ್ವಲ್ಪವೇ ಹಾಲು ಕೊಡುತ್ತಿದೆ. ಇಷ್ಟೇ ಹಾಲನ್ನು ನಾನು ಮಾರುತ್ತಾ ಹೋದರೆ, ಬೇಗನೇ ಹಣ ಮಾಡಲಾರೆನು. ದನದ ಕೆಚ್ಚಲನ್ನು ಕೊಯಿದು ಒಳಗಿರುವ ಹಾಲನ್ನೆಲ್ಲಾ ಒಮ್ಮೆಗೇ ಹಿಂಡ ಬೇಕು; ಆಗ ತುಂಬಾ ಹಾಲು ದೊರೆಯುವುದು. ಅದನ್ನು ಮಾರಿ ನಾನು ಬೇಗನೇ ಹಣದ ಗಂಟು ಕಟ್ಟಬಹುದು."

ಹೀಗೆ ಆಲೋಚಿಸಿ ಅವನು ಮರುದಿನ ಬೆಳಗ್ಗೆ ಎದ್ದು. ಕೆಲವು ಕೊಡಪಾನಗಳನ್ನೂ ಒಂದು ಕತ್ತಿಯನ್ನೂ ತೆಗೆದುಕೊಂಡನು. ಅವುಗಳನ್ನು ಹಿಡಿದುಕೊಂಡು ದನದ ಹತ್ತಿರ ಹೋದನು. ಇದ್ದ ಹಾಲನ್ನೆಲ್ಲಾ ಹಿಂಡಬೇಕೆಂದು ದನದ ಕೆಚ್ಚಲನ್ನೇ ಕೊಯಿದು ಬಿಟ್ಟನು. ಕೆಚ್ಚಲಿನಿಂದ ಹಾಲು ಬರಲಿಲ್ಲ; ನೆತ್ತರು ದರದರನೆ ಸುರಿದು, ದನವು ಸತ್ತುಹೋಯಿತು. ಇದನ್ನು ಕಂಡು ಗೌಳಿಗನು ಬಹಳ ದುಃಖ ಪಟ್ಟನು. ಹಾಲಿಲ್ಲದೆ ದನದ ಕರುವು ಸತ್ತುಹೋಯಿತು. ಗೌಳಿಗನು ಹಣದ ಆಸೆಯಿಂದ ದನವನ್ನೂ ಕರುವನ್ನೂ ಕಳೆದುಕೊಂಡನು. ಅತಿ ಆಸೆ ಗತಿಗೆಡಿಸಿತು ಎಂಬ ಮಾತು ಇಲ್ಲಿಗೆ ಸರಿಯಾಯಿತು.

21. ಬಾಳೆಯ ಗಿಡ.

ಇದು ಬಾಳೆಯ ಗಿಡ. ಇದರ ಹಸುರು ಎಲೆಗಳು ಬಿಸಿಲಲ್ಲಿ ಹೇಗೆ ಮಿಂಚುತ್ತವೆ! ಬಾಳೆಯ ಗಿಡಕ್ಕೆ ಎಲೆಗಳು ತುದಿಯಲ್ಲಿವೆ. ಅದರ ಉದ್ದವಾದ ಎಲೆಗಳು ರೆಕ್ಕೆಗಳಂತೆ ಚಾಚಿಕೊಂಡಿವೆ.



ಈ ಬಾಳೆಯ ಗಿಡವು ಗೊನೆ ಹಾಕಿದೆ. ಗೊನೆಯಲ್ಲಿ ಎಂಟು ಹತ್ತು ಚಿಪ್ಪುಗಳು ಇವೆ. ಒಂದೊಂದು ಚಿಪ್ಪಿನಲ್ಲಿ ಹತ್ತು ಹನ್ನೆರಡು ಕಾಯಿಗಳು ಇವೆ. ಕಾಯಿಗಳು ಈಗ ಹಸುರಾಗಿವೆ.

ಗೊನೆಯ ತುದಿಯಲ್ಲಿರುವುದು ಮೋತಿ. ಕಾಯಿಗಳು ಬೆಳೆಯುವಷ್ಟಕ್ಕೆ ಮೋತಿಯು ಸಣ್ಣದಾಗುವುದು ಅದರ ಒಂದೊಂದೇ ಹಾಳೆಯು ಅರಳಿ ಉದುರುತ್ತದೆ. ಈ ಹಾಳೆಯ ಎಡಕಿನಲ್ಲಿ ಹೂವುಗಳು ಇವೆ. ಮಕ್ಕಳು ಹೂವುಗಳನ್ನು ಚೀಪುತ್ತಾರೆ. ಅವುಗಳಲ್ಲಿ ಸಿಹಿಯಾದ ರಸವು ಇದೆ. ಆದುದರಿಂದಲೇ ಇರುವೆಗಳೂ ನೊಣಗಳೂ ಈ ಹೂವುಗಳನ್ನು ಮುತ್ತಿಕೊಳ್ಳುವುವು.

ಕಾಯಿಗಳು ಬೆಳೆದ ಮೇಲೆ ಗೊನೆಯನ್ನು ಕಡಿಯುತ್ತಾರೆ. ಆಗ ಗಿಡವು ಸತ್ತುಹೋಗುವುದು. ಆದುದರಿಂದ ಗೊನೆಯೊಡನೆ ಗಿಡವನ್ನೇ ಕಡಿದುಹಾಕುತ್ತಾರೆ. ಗಿಡದ ತಾಳನ್ನು ಸುಲಿದರೆ, ಸಿಪ್ಪೆಯು ಹಾಳೆಹಾಳೆಯಾಗಿ ಬರುತ್ತದೆ. ಇದಕ್ಕೆ ಹಂಬೆ ಎನ್ನುವರು. ಒಳಗೆ ಮೆತ್ತಗಾದ ದಿಂಡು ಇದೆ.


ಹಂಬೆಯನ್ನು ಕೊಯಿದು ನೋಡು. ಅದರಲ್ಲಿ ತುಂಬಾ ತೂತುಗಳಿವೆ. ಈ ತೂತುಗಳು ಏತಕ್ಕೆ? ಇವುಗಳ ಮೂಲಕ ನೀರು ಗಿಡದ ಮೈಯಲ್ಲಿ ಹರಿಯುತ್ತಿದೆ. ಎಲ್ಲಾ ಗಿಡಗಳಲ್ಲಿಯೂ ಇಂಥಾ ವೆಜ್ಜಗಳಿವೆ. ಕೆಲವು ಗಿಡಗಳಲ್ಲಿ ವೆಜ್ಜಗಳು ಬಲು ಸಣ್ಣವಾಗಿವೆ; ಅವು ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ.

ಬಾಳೆಯ ಹಣ್ಣು ತಿನ್ನುವುದಕ್ಕೆ ರುಚಿ ಆಗಿದೆ. ಎಲೆಗಳನ್ನೂ ಹಂಬೆಗಳನ್ನೂ ಊಟ ಮಾಡುವುದಕ್ಕೆ ಉಪಯೋಗಿಸುತ್ತಾರೆ. ದಿಂಡನ್ನೂ ಕಾಯಿಗಳನ್ನೂ ಪಲ್ಯ ಮಾಡುತ್ತಾರೆ. ನಾರು ಹೂಮಾಲೆಗಳನ್ನು ಕಟ್ಟುವುದಕ್ಕೂ ಮುಡಿಸುತ್ತುವುದಕ್ಕೂ ಬರುತ್ತದೆ.

---

22. ಬೀಸುಗಲ್ಲು.

ಈ ಹೆಂಗುಸರು ಏನು ಮಾಡುತ್ತಿದ್ದಾರೆ? ಅವರು ಏನನ್ನೋ ಬೀಸುತ್ತಾರೆ. ನಡುವೆ ಬೀಸುಗಲ್ಲು ಇದೆ. ಇಬ್ಬರೂ ಬೀಸುಗಲ್ಲಿನ ಗೂಟವನ್ನು ಹಿಡಿದುಕೊಂಡಿದ್ದಾರೆ.




ಬೀಸುಗಲ್ಲಿನಲ್ಲಿ ಕೆಳಗೆ ಒಂದು ಕಲ್ಲು, ಮೇಲೆ ಒಂದು ಕಲ್ಲು ಇದೆ. ಅಡಿಗಲ್ಲು ತಿರುಗುವುದಿಲ್ಲ; ಮೇಗಲ್ಲು ತಿರುಗುತ್ತದೆ. ಅಡಿಗಲ್ಲಿನ ನಡುವೆ ಒಂದು ತೂತು ಇದೆ. ಅದರೊಳಗೆ ಒಂದು ಗೂಟವನ್ನು ಬಿಗಿ ಮಾಡಿದ್ದಾರೆ. ಮೇಗಲ್ಲಿನ ನಡುವೆ ಬಾಯಿ ಇದೆ. ಈ ಬಾಯಿಗೆ ಅಡಿಗಲ್ಲಿನ ಗೂಟವನ್ನು ಸಿಕ್ಕಿಸಿದ್ದಾರೆ. ಇದರಲ್ಲಿ ಅಕ್ಕಿ, ರಾಗಿ, ಗೋದಿ, ಜೋಳ ಮೊದಲಾದ ಧಾನ್ಯಗಳನ್ನು ಹಾಕುವರು. ಮೇಗಲ್ಲಿನ ಒಂದು ಬದಿಯಲ್ಲಿ ಇನ್ನೊಂದು ಗೂಟವಿದೆ. ಈ ಗೂಟವನ್ನು ಹಿಡಿದುಕೊಂಡು ಮೇಗಲ್ಲನ್ನು ಗರಗರನೆ ತಿರುಗಿಸುವರು. ಆಗ ಕಾಳು ಎರಡು ಕಲ್ಲುಗಳ ನಡುವೆ ಸಿಕ್ಕಿ ಪುಡಿಯಾಗುವುದು. ಪುಡಿಯು ಅಡಿಗಲ್ಲಿನಲ್ಲಿ ನಿಲ್ಲದೆ ಕೆಳಗೆ ಇರುವ ಗೆರಸೆಯಲ್ಲಿ ಬೀಳುತ್ತದೆ. ಹೀಗೆ ಧಾನ್ಯವನ್ನು ಬೀಸಿ ಮಾಡಿದ ಪುಡಿಗೆ ಹಿಟ್ಟು ಎಂದು ಹೆಸರು.

ಬೀಸುಗಲ್ಲಿಗೆ ಚೇಣು ಹಾಕುವರು. ಚೇಣು ಹಾಕಿದರೆ, ನಯವಾದ ಪುಡಿಯು ಸುರಿಯುತ್ತದೆ. ಕಲ್ಲನ್ನು ಒಡಿಸಿ ಬೀಸಿದರೆ. ತರಿ ಉದುರುತ್ತದೆ. ಆದುದರಿಂದ ನಿಧಾನವಾಗಿ ಬೀಸಬೇಕು.

ಹಿಟ್ಟನ್ನು ಬಿಸಿನೀರಲ್ಲಿ ಕಲಸಿ, ನಾದಿ, ರೊಟ್ಟಿ ಮಾಡುತ್ತಾರೆ. ಕೆಲವು ಕಡೆಗಳಲ್ಲಿ ಅನ್ನಕ್ಕೆ ಬದಲಾಗಿ ಹಿಟ್ಟಿನ ರೊಟ್ಟಿಯನ್ನೇ ಮಾಡಿ ತಿನ್ನುವರು.

---

23. ಬೆಕ್ಕು.



ಇದು ನಾನು ಸಾಕಿದ ಬೆಕ್ಕು. ನಾನು ಅದಕ್ಕೆ ಹಾಲನ್ನೂ ಅನ್ನವನ್ನೂ ಕೊಡುತ್ತೇನೆ. ಅದು ಹಾಲನ್ನು ನಾಲಗೆಯಿಂದ ನೆಕ್ಕಿ ಕುಡಿಯುತ್ತದೆ; ಹೊಟ್ಟೆ ತುಂಬಿದ ಮೇಲೆ ಒಲೆಯ ಬದಿಯಲ್ಲಿ ಮಲಗಿಕೊಳ್ಳುತ್ತದೆ. ಬೆಕ್ಕಿಗೆ ಸಂತೋಷವಾದರೆ, ಗುರು

ಗುಟ್ಟುತ್ತದೆ; ಹಸಿವೆಯಾದರೆ, ಮ್ಯಾಂವು ಮ್ಯಾಂವು ಎಂದು ಕೂಗುತ್ತದೆ.

ಈ ಬೆಕ್ಕು ಬಹಳ ಸಾಧುವಾಗಿದೆ. ಅದು ನನ್ನನ್ನು ಕಚ್ಚುವುದಿಲ್ಲ, ಪರಚುವುದೂ ಇಲ್ಲ. ಬೆಕ್ಕಿನ ಮೈಯನ್ನು ಮುಟ್ಟಿ ನೋಡು. ಅದರ ಮೈ ಎಷ್ಟು ಮಿದು! ಅದರ ಕೂದಲು ಎಷ್ಟು ನುಣುಪು!

ಬೆಕ್ಕಿನ ಕಣ್ಣು ಹಸುರಾಗಿದೆ. ಕಣ್ಣುಗೊಂಬೆ ಕತ್ತಲೆಯಲ್ಲಿ ಕೆಂಡದ ಹಾಗೆ ಮಿಂಚುತ್ತದೆ. ಬೆಕ್ಕಿಗೆ ಕತ್ತಲಲ್ಲಿಯೂ ಚೆನ್ನಾಗಿ ಕಣ್ಣು ಕಾಣುತ್ತದೆ.

ಬೆಕ್ಕು ಇಲಿಗಳನ್ನು ಹಿಡಿದು ತಿನ್ನುತ್ತದೆ. ಅದು ಇಲಿಗಳ ಬಿಲದ ಬಳಿಯಲ್ಲಿ ಹೊಂಚು ಹಾಕುತ್ತದೆ. ಇಲಿ ಹೊರಗೆ ಬರುತ್ತಲೇ ಬೆಕ್ಕು ಗಪ್ಪನೆ ಹಾರಿ ಅದನ್ನು ಹಿಡಿಯುತ್ತದೆ. ಬೆಕ್ಕನ್ನು ಮನೆಯಲ್ಲಿ ಸಾಕಿದರೆ, ಇಲಿ ಹೆಗ್ಗಣಗಳ ಕಾಟವು ಕಡಮೆ.

ಬೆಕ್ಕಿಗೆ ಚಿಕ್ಕ ಚಿಕ್ಕ ಕಿವಿಗಳೂ ತುಟಿಯ ಮೇಲೆ ಬಿರುಸು ಮೀಸೆಯೂ ಇವೆ; ಮುಂಗಾಲುಗಳಲ್ಲಿ ಐದೈದು ಬೆರಳುಗಳೂ ಹಿಂಗಾಲುಗಳಲ್ಲಿ ನಾಲ್ಕು ನಾಲ್ಕು ಬೆರಳುಗಳೂ ಇವೆ. ಈ ಬೆರಳುಗಳಲ್ಲಿ ಚೂಪಾದ ಉಗುರುಗಳು ಇರುವುವು. ಅವು ಹೊರಗೆ ಕಾಣುವುದಿಲ್ಲ; ಬೆಕ್ಕಿಗೆ ಸಿಟ್ಟು ಬಂತು ಎಂದರೆ, ಅವು ಫಕ್ಕನೆ ಹೊರಕ್ಕೆ ಬರುತ್ತವೆ; ಮತ್ತು ಅವುಗಳಿಂದ ಬೆಕ್ಕು ನಿನ್ನನ್ನು ಪರಚುವುದು. ಆ ಮೇಲೆ ಆ ಉಗುರುಗಳು ತಿರಿಗಿ ಒಳಗೆ ಹೋಗುತ್ತವೆ.

ಕಾಡಿನಲ್ಲಿಯೂ ಬೆಕ್ಕುಗಳಿವೆ. ಈ ಕಾಡುಬೆಕ್ಕುಗಳು ಮರ ಹತ್ತಿ ಪಕ್ಷಿಗಳನ್ನು ಹಿಡಿದು ತಿನ್ನುತ್ತವೆ.

ಬೆಕ್ಕು ಮುಖತೊಳೆಯುವುದನ್ನು ನೀನು ಎಂದಾದರೂ ಕಂಡಿದ್ದೀಯಾ? ಅದು ಮೊದಲು ಕಾಲನ್ನು ನಾಲಗೆಯಿಂದ ನೆಕ್ಕುತ್ತದೆ; ಮತ್ತು ಆ ಕಾಲಿನಿಂದ ಮುಖವನ್ನು ಒರಸಿಕೊಳ್ಳುತ್ತದೆ. ಮೈಯನ್ನು ನಾಲಗೆಯಿಂದಲೇ ನೆಕ್ಕಿ ನೆಕ್ಕಿ ಶುಚಿ ಮಾಡಿಕೊಳ್ಳುತ್ತದೆ.

---

24. ಮಡಿವಾಳನ ಮಣಕ.



ಒಂದು ಊರ ಹತ್ತಿರ ದೊಡ್ಡ ಹೊಳೆಯು ಹರಿಯುತ್ತಿತ್ತು. ಅದು ಬಹಳ ಆಳವಾಗಿತ್ತು. ಈ ಹೊಳೆಯಲ್ಲಿ ಬೇಸಗೆಯ


ಲ್ಲಿಯೂ ನೀರು ತುಂಬಿರುವುದು. ಅದರಲ್ಲಿ ಮೊಸಳೆಗಳು ಇದ್ದುವು. ಅವುಗಳು ಮಧ್ಯಾಹ್ನದ ಬಿಸಿಲು ಕಾಸಿಕೊಳ್ಳುವುದಕ್ಕೆ ಮೇಲೆ ಬರುವುದನ್ನು ಅನೇಕ ಜನರು ನೋಡಿದ್ದರು.

ಆ ಊರಲ್ಲಿ ಒಬ್ಬ ಮಡಿವಾಳನು ಇದ್ದನು. ಅವನು ಜನರ ಮೈಲಿಗೆ ಅರಿವೆಗಳನ್ನು ತಂದು ಹೊಳೆಯಲ್ಲಿ ಒಗೆದು ಮಡಿ ಮಾಡುತ್ತಿದ್ದನು. ಒಂದು ದಿನ ಅವನು ಬಟ್ಟೆಗಳನ್ನು ಒಗೆದು, ದಂಡೆಯ ಮೇಲೆ ಬಿಸಿಲಿನಲ್ಲಿ ಒಣಗುವುದಕ್ಕೆ ಹಾಕಿ, ತಾನು ಒಗೆಯುವ ಕಲ್ಲಿನ ಮೇಲೆ ಸುಮ್ಮನೆ ಕೂತುಕೊಂಡನು. ಮತ್ತು ಹೊತ್ತು ಕಳೆಯುವುದಕ್ಕೆ ಅವನು— "ಮೊಸಳೆ ಬಂತೋ, ಮೊಸಳೆ!" ಎಂದು ಸುಮ್ಮನೆ ಗಟ್ಟಿಯಾಗಿ ಕೂಗಿದನು. ಕೇಳಿದ ಒಕ್ಕಲಿಗರು ಕೆಲಸವನ್ನು ಬಿಟ್ಟರು; ದೊಣ್ಣೆಗಳನ್ನು ಹಿಡಿದುಕೊಂಡು ಹೊಳೆಬದಿಗೆ ಓಡಿಬಂದರು. ಅವರು ಬಂದು ನೋಡುತ್ತಾರೆ, ಮೊಸಳೆ ಇದ್ದಿಲ್ಲ. ಮಡಿವಾಳನು ಅವರನ್ನು ನೋಡಿ, ಕೈ ತಟ್ಟಿ ಬಿದ್ದುಬಿದ್ದು ನಕ್ಕನು. ಅವರು— "ಈ ಅಗಸನು ಸುಳ್ಳನು, ಇವನ ಮಾತನ್ನು ನಂಬಕೂಡದು" ಎಂದು ಹೇಳಿ, ಬಂದ ದಾರಿಯಿಂದ ಹಿಂದೆ ಹೋದರು.

ಕೆಲವು ದಿನಗಳ ಮೇಲೆ ಅವನು ನೀರಲ್ಲಿ ನಿಂತು ವಸ್ತ್ರ ಒಗೆಯುವಾಗ, ನಿಜವಾಗಿ ಒಂದು ಮೊಸಳೆ ಬಂತು. ಅಗಸನು ಹೆದರಿ— "ಮೊಸಳೆ ಬಂತೋ. ಮೊಸಳೆ!" ಎಂದು ಮೊದಲಿನಂತೆಯೇ ಗಟ್ಟಿಯಾಗಿ ಒದರಿದನು. ಕೇಳಿದ ಒಕ್ಕಲಿಗರು— "ಅವನು ಮುಂಚಿನಂತೆಯೇ ಹುಡುಗಾಟ ಮಾಡುತ್ತಾನೆ" ಎಂದು ತಿಳಿದು ಸಹಾಯಕ್ಕೆ ಬರಲಿಲ್ಲ. ಮೊಸಳೆಯು ಸಾವಕಾಶದಿಂದ ಅವನ ಕಾಲನ್ನು ಅವುಕಿ, ಅವನನ್ನು ನೀರೊಳಗೆ ಎಳೆದುಕೊಂಡು ಹೋಯಿತು.

ಆಟಕ್ಕೆ ಹೇಳಿದ ಸುಳ್ಳು ಮಡಿವಾಳನ ಜೀವದ ಮೇಲೆ ಬಂತು. ಆದುದರಿಂದ ಆಟಕ್ಕಾದರೂ ಸುಳ್ಳಾಡಬಾರದು. ಸುಳ್ಳುಗಾರರು ನಿಜವನ್ನು ಆಡಿದರೂ ಯಾರೂ ನಂಬುವುದಿಲ್ಲ.

25. ಮೀನು ಹಿಡಿಯುವುದು.



ಇಗೋ, ಇವರು ಬೆಸ್ತರು. ಇವರು ಮೀನು ಹಿಡಿಯುವುದಕ್ಕೆ ಹೊಳೆಗೆ ಹೋಗುತ್ತಾರೆ.

ದೋಣಿಯ ಮುಂಭಾಗದಲ್ಲಿ ಇರುವವನನ್ನು ನೋಡು. ಇವನ ಕೈಯಲ್ಲಿ ಒಂದು ಬಲೆಯು ಇದೆ. ಇವನು ಮೀನು

ಎಲ್ಲಿ ಉಂಟೆಂದು ಹೊಂಚು ಹಾಕುತ್ತಾ ನಿಂತಿದ್ದಾನೆ. ಇವನೇ ಬೀಸಾರ.

ದೋಣಿಯ ಹಿಂಭಾಗದಲ್ಲಿ ಇರುವ ಹುಡುಗನು ಒತ್ತಾರ. ಬೀಸಾರನು ಹೇಳುವ ಸ್ಥಳಕ್ಕೆ ಇವನು ದೋಣಿಯನ್ನು ನಡಿಸುತ್ತಾನೆ. ಇವನ ಕೈಯಲ್ಲಿ ಒಂದು ಜಲ್ಲು ಇದೆ. ಈ ಜಲ್ಲನ್ನು ಹುಡುಗನು ನೀರಲ್ಲಿ ನೆಲದ ಮೇಲೆ ಒತ್ತುತ್ತಾನೆ. ಆಗ ನೀರ ಮೇಲೆ ತೇಲುತ್ತಿರುವ ದೋಣಿಯು ಮುಂದೆ ದೂಡಿದಂತೆ ಆಗುತ್ತದೆ. ಹುಡುಗನು ಒತ್ತುವಷ್ಟಕ್ಕೆ ದೋಣಿಯು ಸರಸರನೆ ಮುಂದೆ ಹೋಗುವುದು.

ಬಲೆಯನ್ನು ಹಿಡಿದು ನೋಡು. ಅದರಲ್ಲಿ ತುಂಬಾ ಕಣ್ಣುಗಳಿವೆ. ಬಲೆಯ ಬುಡದಲ್ಲಿ ಸೀಸದ ಗುಂಡುಗಳನ್ನು ತೂಗ ಹಾಕಿದ್ದಾರೆ; ತಲೆಯಲ್ಲಿ ನಾಲ್ಕು ಮಾರು ಹಗ್ಗವಿದೆ.

ಬೀಸಾರನು ಬಲೆಯ ತುದಿಯಲ್ಲಿರುವ ಹಗ್ಗವನ್ನು ಉಂಗುರ ಮಾಡಿ, ಎಡಗೈಯಲ್ಲಿ ಹಿಡಿದುಕೊಳ್ಳುತ್ತಾನೆ. ದೋಣಿಯು ಮೀನು ಇರುವ ಸ್ಥಳಕ್ಕೆ ಬಂದಾಗ, ಬೀಸಾರನು ಬಲೆಯನ್ನು ನೀರ ಮೇಲೆ ಹಾಸಿಬಿಡುತ್ತಾನೆ. ಹಗ್ಗದ ತುದಿಯನ್ನು ಮಾತ್ರ ಕೈಯಲ್ಲಿ ಹಿಡಿದುಕೊಳ್ಳುವನು. ಚಿತ್ರದಲ್ಲಿ ನೋಡು! ಅವನು ಬೀಸುವುದಕ್ಕೆ ಬಲೆಯನ್ನು ಹೇಗೆ ಅಗಲಿಸಿಕೊಂಡು ನಿಂತಿದ್ದಾನೆ!

ಬಲೆಯು ಸೀಸದ ಗುಂಡುಗಳ ಭಾರದಿಂದ ನೀರಲ್ಲಿ ಮುಳುಗುತ್ತದೆ. ಬಲೆ ಬಿದ್ದಷ್ಟು ಸ್ಥಳದಲ್ಲಿ ಇರುವ ಮೀನುಗಳು ಅದರೊಳಗೆ ಇರುವುವು. ಅವು ತಪ್ಪಿಸಿಕೊಳ್ಳುವುದಕ್ಕೆ ಅತ್ತಿತ್ತ ಹಾರುವಾಗ, ಬಲೆಯ ಕಣ್ಣುಗಳಲ್ಲಿ ಸಿಕ್ಕಿಕೊಳ್ಳುತ್ತವೆ. ಸ್ವಲ್ಪ

ಹೊತ್ತಿನ ಮೇಲೆ ಬೇಸಾರನು ಬಲೆಯನ್ನು ಮೆಲ್ಲನೆ ಮೇಲಕ್ಕೆ ಎಳೆದು, ದೋಣಿಯೊಳಗೆ ಹಾಕುತ್ತಾನೆ; ಮತ್ತು ಒಂದೊಂದೇ ಮೀನನ್ನು ಬಲೆಯ ಕಣ್ಣುಗಳಿಂದ ಎಳೆದುತೆಗೆದು, ದೋಣಿಯೊಳಗೆ ಇಡುವನು.

ಜನರು ಮೀನನ್ನು ತಿನ್ನುವರು; ಉಪ್ಪು ಹಾಕಿ ಒಣಗಿಸಿ ಇಟ್ಟುಕೊಳ್ಳುವುದೂ ಉಂಟು.

26. ಕುರುಡ.



ಅಯ್ಯೋ, ಪಾಪ! ಇವನು ಕುರುಡನು. ಇವನಿಗೆ ಕಣ್ಣು ಕಾಣುವುದಿಲ್ಲ. ಇವನು ಹುಟ್ಟುವಾಗಲೇ ಕುರುಡನಾಗಿದ್ದನು. ಹುಟ್ಟಿದಂದಿನಿಂದ ಯಾವ ವಸ್ತುವನ್ನಾದರೂ ಕಾಣಲಿಲ್ಲ. ಬೆಳಕು ಏನೆಂದು ಇವನು ನೋಡಲೇ ಇಲ್ಲ.

ಕಣ್ಣು ಕಾಣದಿದ್ದರೂ ಕುರುಡರು ಕೆಲಸಗಳನ್ನು ಮಾಡ ಬಲ್ಲರು. ಕೆಲವು ಕುರುಡರು ಬುಟ್ಟಿಗಳನ್ನು ಹೆಣೆಯುವರು; ಕೆಲವರು ಚಾಪೆಗಳನ್ನು ಮಾಡುವರು. ಈ ಕುರುಡನಿಗೆ ಚೆನ್ನಾಗಿ ಹಾಡುವುದಕ್ಕೆ ಬರುತ್ತದೆ. ಅವನು ಮನೆಮನೆಗೆ ಹೋಗಿ ತಂಬೂ ರಿಯನ್ನು ಬಾರಿಸಿ ಹಾಡುತ್ತಾನೆ. ಅವನ ಕೈಯಲ್ಲಿ ತಂಬೂರಿ ಇದೆ, ನೋಡು. ಆಗಾಗ್ಗೆ ದಾರಿಬದಿಯಲ್ಲಿ ಕೂತುಕೊಂಡು ಹಾಡುತ್ತಾನೆ; ಹಾದು ಹೋಗುವ ಜನರು ಅವನಿಗೆ ದುಡ್ಡು ದುಗ್ಗಾಣಿ ಕೊಡುತ್ತಾರೆ; ಇದರಿಂದಲೇ ಅವನಿಗೆ ಜೀವನವಾ ಗುತ್ತದೆ.

ಕುರುಡನಿಗೆ ಕಣ್ಣು ಕಾಣದಿದ್ದರೂ, ಅವನು ಒಬ್ಬನೇ ನಡೆದು ಹೋಗುತ್ತಾನೆ. ನಡೆಯುವಾಗ ಕೈಯಲ್ಲಿದ್ದ ಕೋಲನ್ನು ಮುಂದೆ ಊರುತ್ತಾನೆ. ನೆಲವು ಎಲ್ಲಿ ಎತ್ತರ, ಎಲ್ಲಿ ತಗ್ಗು ಎಂದು ಕೋಲಿ ನಿಂದ ಬಳಚಿ ನೋಡುತ್ತಾನೆ. ಇವನು ಕಿವುಡನಲ್ಲ; ಗಾಡಿಯ ಶಬ್ದವನ್ನು ದೂರದಿಂದ ಕೇಳಿ, ದಾರಿಯ ಒಂದು ಬದಿಗೆ ಹೋಗಿ ನಿಲ್ಲುವನು.

ಒಂದು ದಿನ ಈ ಕುರುಡನು ಊರ ಜಾತ್ರೆಗೆ ಹೋಗುತ್ತಿ ದ್ದನು. ಅವನು ಆ ವರೆಗೆ ಅಲ್ಲಿಗೆ ಹೋದವನಲ್ಲ. ಕುರು ಡನು ಜಾತ್ರೆಗೆ ಹೋಗುವ ಮಕ್ಕಳ ಸ್ವರವನ್ನು ಕೇಳಿ-- "ಅಣ್ಣಾ, ಜಾತ್ರೆಗೆ ಹೋಗುವ ದಾರಿ ತೋರಿಸು" ಎಂದು ಬೇಡಿದನು. ಆ ಮಕ್ಕಳು ನಗುತ್ತಾ ಬಡ ಕುರುಡನಿಗೆ ತಪ್ಪು ದಾರಿಯನ್ನು ತೋರಿಸಿಕೊಟ್ಟರು. ಒಬ್ಬ ಹುಡುಗನು ಅವನ ಕೈಯಲ್ಲಿದ್ದ ತಂಬೂರಿಯನ್ನು ಕಸಕೊಳ್ಳುವುದಕ್ಕೆ ಮೆಲ್ಲನೆ ಹಿಂದು ಗಡೆ ಹೋದನು. ಇದನ್ನು ನೋಡಿ ಮತ್ತೊಬ್ಬ ಹುಡುಗನು--

“ಗೆಳೆಯರೇ, ಕುರುಡರಿಗೂ ಮೂಕರಿಗೂ ತಂಟೆ ಮಾಡಬಾರದು, ಹಾದಿ ತಪ್ಪಿಸಬಾರದು; ಹಾಗೆ ಮಾಡುವುದು ದುಷ್ಟತನವೆಂದು ನಮಗೆ ಉಪಾಧ್ಯಾಯರು ಹೇಳಿಕೊಟ್ಟಿದ್ದಾರೆ. ನಾವು ಕುರುಡನಿಗೆ ಈ ಪ್ರಕಾರ ಮಾಡುವುದು ಸರಿಯೇ?” ಎಂದು ಹೇಳಿದನು.

ತರುವಾಯ ಈ ಒಳ್ಳೆಯ ಹುಡುಗನು ಕುರುಡನ ಕೋಲಿನ ತುದಿಯನ್ನು ತಾನು ಹಿಡಿದುಕೊಂಡು ಅವನನ್ನು ಜಾತ್ರೆಗೆ ನಡಿಸಿದನು. ಕುರುಡನಿಗೆ ಸಂತೋಷವಾಯಿತು.

---

27. ಕೈಗಳು.



ನಿನ್ನ ಕೈಗಳನ್ನು ತೋರಿಸು! ನೀನು ಯಾವ ಕೈಯಿಂದ ಊಟ ಮಾಡುತ್ತೀ? ಯಾವ ಕೈಯಿಂದ ಬರೆಯುತ್ತೀ? ಆ ಕೈಗೆ ಬಲಗೈ ಎಂದು ಹೆಸರು. ಮತ್ತೊಂದಕ್ಕೆ ಎಡಗೈ ಎಂದು ಹೆಸರು. ಕೈಗೆ ಐದು ಬೆರಳುಗಳು ಇವೆ. ಒಂದು ಬೆರಳು ಗಿಡ್ಡವಾಗಿಯೂ ತೋರವಾಗಿಯೂ ಇದೆ; ಇದೇ ಹೆಬ್ಬೆಟ್ಟು. ಹೆಬ್ಬೆಟ್ಟು ಇಲ್ಲ

ದಿದ್ದರೆ, ಯಾವ ವಸ್ತುವನ್ನಾದರೂ ಬಿಗಿಯಾಗಿ ಹಿಡಿದುಕೊಳ್ಳಲಾರೆವು.

ಹೆಬ್ಬೆಟ್ಟಿನ ಒತ್ತಿನಲ್ಲಿ ಇರುವ ಬೆರಳಿಗೆ ತೋರ್ಬೆಟ್ಟು ಎನ್ನುವರು; ಅದರಿಂದ ವಸ್ತುಗಳನ್ನು ತೋರಿಸುತ್ತೇವೆ. ಅದರ ಹಿಂದೆ ನಡುಬೆಟ್ಟು ಉಂಟು; ಇದು ಉದ್ದವಾಗಿದೆ. ನಾಲ್ಕನೆಯ ಬೆರಳಿನಲ್ಲಿ ಜನರು ಉಂಗುರಗಳನ್ನು ಹಾಕಿಕೊಳ್ಳುವರು; ಅದಕ್ಕೆ ಉಂಗುರದ ಬೆಟ್ಟು ಎನ್ನುವರು. ಐದನೆಯ ಬೆರಳು ಸಣ್ಣದಾಗಿದೆ; ಅದು ಕಿರಿಬೆಟ್ಟು ಎನ್ನಿಸಿಕೊಳ್ಳುವುದು.

ಕೈಯ ಒಳಮೈಗೆ ಅಂಗೈ ಎಂದು ಹೆಸರು; ಹೊರಮೈಗೆ ಮೇಗೈ ಎಂದು ಹೆಸರು. ಕೈಯ ಬೆರಳುಗಳನ್ನು ಮಡಚಿ ಮುಷ್ಟಿ ಹಿಡಿಯುತ್ತೇವೆ. ಹುಡುಗರು ಮುಷ್ಟಿಯಿಂದ ಗುದ್ದಾಡಿಕೊಳ್ಳುತ್ತಾರೆ; ಗುದ್ದಾಡುವುದು ಕೆಡುಕು.

ನಾವು ಕೈಗಳಿಂದ ಕೆಲಸ ಮಾಡುತ್ತೇವೆ. ಕೈಯು ಹಾರೆಯನ್ನು ಹಿಡಿದು ಅಗಿಯುತ್ತದೆ; ಕತ್ತಿಯನ್ನು ಹಿಡಿದು ಕಡಿಯುತ್ತದೆ; ಲೇಖನಿಯನ್ನು ಹಿಡಿದು ಬರೆಯುತ್ತದೆ; ಸೂಜಿಯನ್ನು ಹಿಡಿದು ಹೊಲಿಯುತ್ತದೆ; ಹಗ್ಗವನ್ನು ಹಿಡಿದು ನೀರು ಸೇದುತ್ತದೆ; ಅನ್ನವನ್ನು ಬಾಯಿಗೆ ಇಡುತ್ತದೆ.

ಕೈಗಳು ಯಾವಾಗಲೂ ನಿರ್ಮಲವಾಗಿರಬೇಕು; ಹಾಗಿದ್ದರೆ ಪುಸ್ತಕಗಳು ಮಲಿನವಾಗುವುದಿಲ್ಲ; ಕಜ್ಜಿ, ಹುಣ್ಣುಗಳು ಹುಟ್ಟುವುದಿಲ್ಲ. ಉಗುರಿನ ಎಡಕಿನಲ್ಲಿ ಕೊಳೆ ನಿಂತರೆ, ಅದನ್ನು ಸರಿಯಾಗಿ ತೊಳೆದು ತೆಗೆಯಬೇಕು. ಉಗುರುಗಳನ್ನು ಬೆಳೆಯಬಿಡಬಾರದು. ಊಟ ಮಾಡುವ ಮೊದಲು ಕೈ ತೊಳೆದು

ಕೊಳ್ಳುವುದಕ್ಕೆ ಮರೆಯಬೇಡ! ತುದಿಬೆರಳನ್ನು ಬಾಯಿಗೆ ಹಾಕಿ ಚೀಪುವುದೂ ಉಗುರುಗಳನ್ನು ಹಲ್ಲುಗಳಿಂದ ಕಚ್ಚಿ ತೆಗೆಯುವುದೂ ಮರ್ಯಾದೆಯಲ್ಲ.

---

28. ಗುಬ್ಬಿಯೂ ಇತರ ಪಕ್ಷಿಗಳೂ.



ಒಂದು ಹಳ್ಳಿಯಲ್ಲಿ ಒಬ್ಬ ಹಕ್ಕಿಬೇಟೆಗಾರನು ಇದ್ದನು. ಅವನು ಬಲೆ ಹಾಕಿ ಹಕ್ಕಿಗಳನ್ನು ಹಿಡಿದು ಮಾರುತ್ತಿದ್ದನು. ಒಂದು ದಿನ ಅವನು ಹೊಲದಲ್ಲಿ ಸಣಬಿನ ಬೀಜಗಳನ್ನು ಬಿತ್ತಿದನು. ಅದನ್ನು ಒಂದು ಗುಬ್ಬಿಯು ಕಂಡಿತು. ಅದು ಬೇರೆ ಹಕ್ಕಿಗಳನ್ನು ಕರೆದು ಹೀಗೆಂದಿತು—"ಇಕೊಳ್ಳಿ, ಆ ಬೇಟೆಗಾರನು ಬೀಜ ಬಿತ್ತುತ್ತಾನೆ. ಅದು ಎಂಥಾ ಬೀಜವೆಂದು ಬಲ್ಲಿರಾ? ಅದು ಸಣಬಿನ ಬೀಜ. ಸಣಬಿನಿಂದ ನಾರು ತೆಗೆಯುತ್ತಾರೆ; ನಾರಿನಿಂದ ಬಲೆ ನೇಯುತ್ತಾರೆ; ಬಲೆಯಿಂದ ಬೇಟೆಗಾರನು

ನಮ್ಮನ್ನು ಹಿಡಿಯುತ್ತಾನೆ; ಆದುದರಿಂದ ನಾವೆಲ್ಲರೂ ಒಟ್ಟಾಗಿ ಆ ಬೀಜಗಳನ್ನು ಈಗಲೇ ಕೆದರಿ ಹಾಳುಮಾಡುವಾ."

ಗುಬ್ಬಿಯ ಮಾತನ್ನು ಬೇರೆ ಪಕ್ಷಿಗಳು ಒಪ್ಪಿಕೊಳ್ಳಲಿಲ್ಲ. ಬೀಜಗಳು ಮೊಳೆತು ಸಸಿಗಳಾದುವು. ಆಗ ಗುಬ್ಬಿಯು ಮತ್ತೊಮ್ಮೆ ಪಕ್ಷಿಗಳಿಗೆ ಹೀಗೆಂದಿತು—"ಈಗಲಾದರೂ ಸಣಬಿನ ಮೊಳೆಯನ್ನೇ ಕಿತ್ತುಬಿಡೋಣ." ಆಗ ಪಾರಿವಾಳವು—"ನಿನಗೆ ಹುಚ್ಚು, ಸಣಬಿನಿಂದ ಬಲೆ ಮಾಡುತ್ತಾರೆಂದು ನಿನಗೆ ಹೇಗೆ ಗೊತ್ತು?" ಎಂದು ಬೈದುಬಿಟ್ಟಿತು. ಗುಬ್ಬಿಯು ಸಿಟ್ಟಾಗಿ ಸುಮ್ಮಗಾಯಿತು.

ಕೆಲವು ವಾರಗಳ ಮೇಲೆ ಸಣಬಿನ ಗಿಡಗಳು ಬೆಳೆದು ಹೂಬಿಟ್ಟುವು. ಅವುಗಳಲ್ಲಿ ಕೋಡುಗಳು ಹುಟ್ಟಿ ಬೆಳೆದು ಒಣಗಿದುವು. ಬೇಡನು ಗಿಡಗಳನ್ನು ಕಿತ್ತು, ಮನೆಗೆ ತೆಗೆದುಕೊಂಡು ಹೋದನು.

ಒಂದು ದಿನ ಗುಬ್ಬಿಯೂ ಬೇರೆ ಹಕ್ಕಿಗಳೂ ಒಂದು ಬೇಣದಲ್ಲಿ ಮೇಯುತ್ತಿದ್ದುವು. ಆಗ ಬೇಟೆಗಾರನು ಹೊಸ ಬಲೆಯನ್ನು ಹಿಡಿದುಕೊಂಡು ಅಲ್ಲಿಗೆ ಬಂದನು. ಗುಬ್ಬಿಯು ಇದನ್ನು ಕಂಡು—"ಪಕ್ಷಿಗಳಿರಾ, ನೋಡಿರಿ! ಹೊಸ ಬಲೆ, ನನ್ನ ಮಾತನ್ನು ನೀವು ಕೇಳಲಿಲ್ಲ. ಇನ್ನು ಮುಂದೆ ನಾನು ನಿಮ್ಮಂಥಾ ಹೆಡ್ಡ ಹಕ್ಕಿಗಳ ಜೊತೆಯಲ್ಲಿ ಇರುವುದಿಲ್ಲ" ಎಂದು ಹೇಳಿ ಹಾರಿ ಹೋಯಿತು. ಗುಬ್ಬಿಯು ಆ ದಿನವೇ ಕಾಡನ್ನು ಬಿಟ್ಟು, ಊರಿಗೆ ಬಂದು ಮನೆಗಳಲ್ಲಿ ಗೂಡು ಕಟ್ಟಿಕೊಂಡಿತು.

29. ತೆನೆ ಬಡೆಯುವುದು.



ಈ ಹೊತ್ತು ನಮಗೆ ಸಂತೋಷದ ದಿನ; ಗದ್ದೆಯಲ್ಲಿದ್ದ ಪೈರು ನಮ್ಮ ಅಂಗಳದಲ್ಲಿ ಬಂದುಬಿದ್ದಿದೆ. ನಾವು ಮಳೆಗಾಲ ದಲ್ಲಿ ಚೆನ್ನಾಗಿ ಕಷ್ಟಪಟ್ಟು ಕೆಲಸ ಮಾಡಿದೆವು. ನಮ್ಮ ಗದ್ದೆ ಯಲ್ಲಿ ಒಳ್ಳೆಯ ಬೆಳೆಯಾಗಿದೆ. ಎಷ್ಟು ಕೆಯ್ಯ ಸೂಡಿಗಳನ್ನು ತಂದು ಅಂಗಳದಲ್ಲಿ ಬಳೆಹಾಕಿದ್ದಾರೆ!

ಕೆಯ್ಯಿಂದ ಬತ್ತವನ್ನು ಹೇಗೆ ಉದುರಿಸುತ್ತಾರೆ, ನೋಡೋ ಣ, ಬಾ. ಅಗೋ, ಅಲ್ಲಿ ಒಂದು ಮಂಚವಿದೆ. ಮಂಚದ ಸುತ್ತಲು ನಿಂತಿರುವ ಹೆಂಗುಸರನ್ನು ನೋಡು. ಒಬ್ಬೊಬ್ಬಳು ಆ ಬಳೆಯಿಂದ ಒಂದೊಂದು ಸೂಡಿಯನ್ನು ಹಿಡಿದುಕೊಂಡು

ಮಂಚದ ಮೇಲೆ ಬಡೆಯುತ್ತಾಳೆ; ಅವಳು ಸೂಡಿಯನ್ನು ಬಡೆದು, ಬತ್ತವನ್ನು ಉದುರಿಸುತ್ತಾಳೆ. ಸೂಡಿಯನ್ನು ಬಡೆಯುವ ಮಂಚಕ್ಕೆ ಪಡಿಮಂಚ ಎಂದು ಹೆಸರು. ಈ ಮಂಚದ ದಿಂಡು ಗಳಿಗೆ ಬಲಗಗಳನ್ನು ಸಿಕ್ಕಿಸಿದ್ದಾರೆ. ಬಲಗಗಳ ನಡುವೆ ಎಡೆಗ ಳಿವೆ. ಸೂಡಿಗಳನ್ನು ಬಲಗಗಳ ಮೇಲೆ ಬಿರುಸಾಗಿ ಬಡೆಯು ತ್ತಲೇ, ಬತ್ತವು ಉದುರಿ, ಎಡೆಯಿಂದ ಮಂಚದ ಕೆಳಕ್ಕೆ ಬೀಳು ವುದು. ಕೆಲವು ಕಡೆಗಳಲ್ಲಿ ಸೂಡಿಗಳನ್ನು ಬಡೆಯುವುದಕ್ಕೆ ಬದಲಾಗಿ ಎತ್ತುಗಳಿಂದ ತುಳಿಸುವುದೂ ಉಂಟು.

ಬಡೆದ ಮೇಲೆ ಸೂಡಿಗಳಿಗೆ ಒಣಹುಲ್ಲು ಎಂದು ಹೆಸರು. ಸೂಡಿಯಾಗಿರುವ ಹುಲ್ಲಿಗೆ ಉಂಡಿಗೆ ಎನ್ನುತ್ತಾರೆ. ಒಣ ಹುಲ್ಲನ್ನು ದನಗಳಿಗೂ ಎತ್ತುಗಳಿಗೂ ಹಾಕುವರು. ಮನೆಗಳ ಮಾಡುಗಳನ್ನು ಸೂಡಿಹುಲ್ಲಿನಿಂದ ಹೊಚ್ಚುವರು. ಚಿತ್ರದಲ್ಲಿ ಒಬ್ಬನು ಸೂಡಿಹುಲ್ಲನ್ನು ರಾಸಿ ಹಾಕಿ, ಹುಲ್ಲುಕುತ್ತರೆ ಮಾಡು ತ್ತಾನೆ; ನೋಡು!

ಬತ್ತದ ರಾಸಿಯನ್ನು ಮನೆಯೊಳಗೆ ಒಯ್ಯುವರು. ಬತ್ತ ವನ್ನು ಅಂಗಳದಲ್ಲೇ ಬಿಟ್ಟರೆ, ಮಳೆಗೆ ಕೆಟ್ಟುಹೋಗಬಹುದು; ಹುಳುವು ತಿಂದುಬಿಡುವುದು. ಕೆಯ್ಯನ್ನೆಲ್ಲಾ ಬಡೆದ ಮೇಲೆ ಬತ್ತ ವನ್ನು ಅಂಗಳದ ನಡುವೆ ರಾಸಿ ಮಾಡಿ, ಸುತ್ತಲೂ ಒಣಹುಲ್ಲಿ ನಿಂದ ಮುಚ್ಚಿ, ಮಡೆಹಗ್ಗದಿಂದ ಬಿಗಿಯುವರು; ಇದಕ್ಕೆ ತಿರಿ ಎಂದು ಹೆಸರು. ತಿರಿಯ ಮೇಲೆ ಹುಲ್ಲು ಹೊಚ್ಚುವುದರಿಂದ, ಮಳೆ ಬಿದ್ದರೂ ಒಳಗಿನ ಬತ್ತಕ್ಕೆ ನೀರು ಮುಟ್ಟಲಾರದು.

30. ಚಂದ್ರ.



ರಾತ್ರಿಯಲ್ಲಿ ನಮಗೆ ಚಂದ್ರನಿಂದ ಬೆಳಕು ಬರುತ್ತದೆ. ಚಂದ್ರನು ಬೆಳ್ಳಿಯ ಹಾಗೆ ಬೆಳ್ಳಗೆ ಇದ್ದಾನೆ. ಚಂದ್ರನ ಬೆಳಕಿಗೆ ಬೆಳ ದಿಂಗಳು ಎಂದು ಹೆಸರು. ಬೆಳದಿಂಗಳಿಗೆ ಸೂರ್ಯನ ಬೆಳಕಿನ ಹಾಗೆ ಕಾವು ಇಲ್ಲ.

ಚಂದ್ರನು ಸೂರ್ಯನಂತೆ ಯಾವಾಗಲೂ ಒಂದೇ ಹೊತ್ತಿಗೆ ಮೂಡುವುದಿಲ್ಲ; ಒಂದೇ ಹೊತ್ತಿಗೆ ಮುಳುಗುವುದಿಲ್ಲ. ಕೆಲವು ರಾತ್ರಿ ಚಂದ್ರನ ಪೂರ್ಣ ಬಿಂಬವು ಆಕಾಶದಲ್ಲಿ ಕಾಣುವುದಿಲ್ಲ; ಅದು ಕೊಂಬಿನ ಹಾಗೆ ಬಾಗಿರುವುದು. ಅದಕ್ಕೆ ಅರ್ಧ ಚಂದ್ರ ಎನ್ನುವರು. ಒಂದು ದಿನ ಚಂದ್ರನು ಬಟ್ಟಲಿನ ಹಾಗೆ ದುಂಡ ಗಾಗಿ ತೋರುವನು; ಆ ದಿನಕ್ಕೆ ಹುಣ್ಣಿಮೆ ಎಂದು ಹೇಳು ವರು. ಹುಣ್ಣಿಮೆದಿನದಲ್ಲಿ ಚಂದ್ರನು ಬೇಗನೆ ಮೂಡುತ್ತಾನೆ. ಆ ರಾತ್ರಿ ಹಿಟ್ಟು ಚೆಲ್ಲಿದ ಹಾಗೆ ಬೆಳದಿಂಗಳು ಬೀಳುತ್ತದೆ.

ಒಂದು ರಾತ್ರಿ ಚಂದ್ರನು ಕಾಣುವುದೇ ಇಲ್ಲ; ಆ ದಿನಕ್ಕೆ ಅಮಾವಾಸೆ ಎಂದು ಹೆಸರು.

ಇರುಳಲ್ಲಿ ಬೆಳದಿಂಗಳು ಬಿದ್ದಾಗ, ಪ್ರಯಾಣಿಕರು ಒಂದು ಊರಿಂದ ಮತ್ತೊಂದು ಊರಿಗೆ ಸಂತೋಷದಿಂದ ಪ್ರಯಾಣ ಮಾಡುತ್ತಾರೆ. ಹಗಲಿನ ಬಿಸಿಲಿಗೆ ನಡೆದರೆ, ಬಹಳ ದಣುವಾಗುವುದು; ಬೆಳದಿಂಗಳಲ್ಲಿ ಹಾದಿ ನಡೆಯುವುದಕ್ಕೆ ಆಯಾಸವಾಗುವುದಿಲ್ಲ.

31. ನಕ್ಷತ್ರ.

(ರಾಗ ಮೋಹನ. ನೋಟು: ತಾಳ ಚಾಪು.)

ಮಿನುಗೆಲೆ ಮಿನುಗೆಲೆ ನಕ್ಷತ್ರ! ।
ನನಗಿದು ಚೋದ್ಯವು ಬಹುಚಿತ್ರ! ॥
ಘನ ಗಗನದಿ ಬಲು ದೂರದೊಳು ।
ಮಿನುಗುತಿ ವಜ್ರಾಕಾರದೊಳು. ॥

ತೊಳಗುವ ಸೂರ್ಯನು ಮುಳುಗುತಲೇ ।
ಬೆಳಕದು ಕಾಣದೆ ಕಳೆಯುತಲೇ ॥
ಹೊಳಪನು ಕೊಡುತಿಯೆ ನನಗಂದು; ।
ತಳತಳಿಸುವೆ ಇರುಳಲಿ ನಿಂದು. ॥

ಅಂದಾ ದಾರಿಗ ಕೆಂಗಿಡಿಗೆ ।
ವಂದಿಸಿ ನಡೆವನು ಅಡಿಗಡಿಗೆ. ॥
ಕುಂದಲು ನಿನ್ನಯ ಮಿಣುಕು ಲವಂ ।
ಮುಂದಿನ ಹಾದಿಯ ಕಾಣನವಂ. ॥

ದೂರದ ಬಾನೊಳು ಹೊಂಚುತಿಯೇ? |
ಬಾರಿಗೆ ಬಾರಿಗೆ ಮಿಂಚುತಿಯೇ? ||
ತೋರುತ ತೋರದೆ ಮೂಡುತಿಯೇ? |
ದಾರಿಗೆ ಹೊಳಪನು ಮಾಡುತಿಯೇ? ||

ನನಗಿದು ತಿಳಿಯದು ಬಲು ಚಿತ್ರ, |
ಮಿನುಗೆಲೆ ಮಿನುಗೆಲೆ ನಕ್ಷತ್ರ. ||

---

32. ಮೈಗಳ್ಳ ಬಾಬಣ್ಣ.



ಇವನು ಸೋಮಾರಿ ಹುಡುಗನು. ಇವನಿಗೆ ಕೆಲಸ ಮಾಡುವುದಕ್ಕೆ ಮನಸ್ಸಿಲ್ಲ. ಪುಸ್ತಕಗಳನ್ನು ಮೇಜಿನ ಮೇಲೆ ಎಸೆದು ಬಿಟ್ಟಿದ್ದಾನೆ; ಮೇಜಿನ ಮೇಲೆ ಒರಗಿಕೊಂಡು ತೂಕಡಿಸುತ್ತಾನೆ.

ತಾಯಿಯು ಬಂದು ಹುಡುಗನನ್ನು ಕರೆದು—"ಸಾಲೆಗೆ ಹೋಗು" ಎಂದಳು. ಬಾಬಣ್ಣನು ಸಾಲೆಗೆ ಹೋಗಲೊಲ್ಲನು. ತಾಯಿಯು ಹೊಡೆಯುವಳೆಂದು ಅವನು ಅಂಜಿ,

ಪುಸ್ತಕವನ್ನು ತೆಗೆದುಕೊಂಡು, ಮನೆಯಿಂದ ಹೊರಟನು. ಆದರೆ ಬಾಬಣ್ಣನು ಪಾಠಶಾಲೆಯ ಹಾದಿ ಹಿಡಿಯಲಿಲ್ಲ. ನೆಟ್ಟಗೆ ದನ ಮೇಯಿಸುವ ಹುಡುಗರು ಆಡುವ ಬೈಲಿಗೆ ಹೋದನು.

ದನಕಾಯುವ ಹುಡುಗರು ಅಲ್ಲಿ ಇನ್ನೂ ಬಂದಿರಲಿಲ್ಲ. ಮೈದಾನು ನೋಡುವುದಕ್ಕೆ ಚಂದವಾಗಿತ್ತು. ಅದು ಹುಲ್ಲಿನಿಂದ ಹಸುರಾಗಿತ್ತು. ಗಿಡಗಳಲ್ಲಿ ಹೂವುಗಳು ಅರಳಿದ್ದುವು. ಜೇನುನೊಣಗಳು ಹೂವಿಂದ ಹೂವಿಗೆ ಹಾರುತ್ತಿದ್ದುವು.

ಬಾಬಣ್ಣನು ಒಂದು ನೊಣವನ್ನು ನೋಡಿ—"ನೊಣವೇ, ನೊಣವೇ, ನನ್ನೊಂದಿಗೆ ಆಡಬರುತ್ತೀಯಾ?" ಎಂದು ಕೇಳಿದನು. ಅದಕ್ಕೆ ನೊಣವು—"ನಾನು ಹೂವಿಂದ ರಸವನ್ನು ಹೀರಿ, ಜೇನನ್ನು ಕೂಡಹಾಕುತ್ತೇನೆ. ಬಿಸಿಲು ಏರಿದರೆ, ಜೇನನ್ನು ಹೀರುವುದಕ್ಕೆ ಆಗುವುದಿಲ್ಲ. ನಾನು ಮೈಗಳ್ಳನಾಗಿ ಹೊತ್ತು ಕಳೆಯಲಾರೆನು" ಎಂದು ಹೇಳಿ, ಇನ್ನೊಂದು ಹೂವಿಗೆ ಹಾರಿಹೋಯಿತು.

ಬಳಿಕ ಅವನು ಮರದ ಮೇಲೆ ಗೂಡು ಕಟ್ಟುತ್ತಿರುವ ಪಾರಿವಾಳವನ್ನು ಕಂಡು—"ಎಲೆ ಹಕ್ಕಿಯೇ, ನನ್ನ ಸಂಗಡ ಆಡ ಬಾ" ಎಂದು ಕರೆದನು. ಅದಕ್ಕೆ ಪಾರಿವಾಳವು—"ಅಯ್ಯೋ, ನಾನು ಹೇಗೆ ಬರಲಿ? ನಾನು ಗೂಡು ಕಟ್ಟುತ್ತೇನೆ; ಈಗ ಗೂಡು ಕಟ್ಟದಿದ್ದರೆ, ನನ್ನ ತತ್ತಿಗಳನ್ನು ಎಲ್ಲಿ ಇಡಲಿ? ಮಳೆ ಬರುವ ಮುಂಚೆಯೇ ನಾನು ಗೂಡು ಕಟ್ಟಬೇಕು; ನಿನಗೆ ಕೆಲಸವಿಲ್ಲವೇ?" ಎಂದು ಹೇಳಿ ಸುಮ್ಮಗಾಯಿತು.

ಕೊನೆಗೆ ಹುಡುಗನು ಒಂದು ನಾಯಿಯನ್ನು ಕಂಡು—"ಓ ನಾಯಿಯೇ, ಇತ್ತ ಬಾ, ನಾವಿಬ್ಬರೂ ಆಡುವಾ" ಎಂದು

ಹೇಳಿದನು. ನಾಯಿಯು ಹುಡುಗನಿಗೆ—"ಅದು ಹೇಗಾದೀತು? ನನಗೆ ಹೆಚ್ಚು ಕೆಲಸವಿದೆ. ನನ್ನ ಒಡೆಯನ ಮನೆ ಕಾಯಬೇಕು; ನಾನು ಅಲ್ಲಿ ಒಂದು ಗಳಿಗೆ ತಪ್ಪಿದರೆ, ದನಕರಗಳು ಅವನ ಹಿತ್ತಿಲನ್ನು ನುಗ್ಗುತ್ತವೆ. ನಾನು ನಿನ್ನ ಕೂಡ ಆಡುವುದಕ್ಕೆ ಬರಲಾರೆನು" ಎಂದು ಹೇಳಿ ಓಡಿಹೋಯಿತು. ಹುಡುಗನು—"ಇದೇನು, ಎಲ್ಲರಿಗೂ ಕೆಲಸವಿದೆ; ನಾನೊಬ್ಬನೇ ಈ ಹಳ್ಳಿಯಲ್ಲಿ ಮೈಗಳ್ಳನೇ! ಇನ್ನು ಮುಂದೆ ನಾನೂ ಕೆಲಸ ಮಾಡಬೇಕು; ತಪ್ಪದೆ ಸಾಲೆಗೆ ಹೋಗಬೇಕು" ಎಂದು ಹೇಳಿ, ಆಗಲೇ ಪಾಠಶಾಲೆಗೆ ನಡೆದುಬಿಟ್ಟನು.

ಅಂದಿನಿಂದ ಬಾಬಣ್ಣನು ತಪ್ಪದೆ ದಿನಾಲು ಸಾಲೆಗೆ ಹೋಗುತ್ತಿದ್ದನು; ಪಾಠಗಳನ್ನು ಚೆನ್ನಾಗಿ ಮನಸ್ಸಿಟ್ಟು ಕಲಿತು ಗಟ್ಟಿಗನಾದನು.

ಬಳಲದೆ ಜೇನ್‌ಹುಳು ಬಿಸಿಲಿನ ಸಮಯದಿ
ತೊಳಲುತ ಬಗೆಬಗೆ ಪುಷ್ಪಗಳಾ |
ಒಳಗಿಹ ಜೇನನು ಕೂಡಿಸುವಂದದಿ
ಕೆಲಸವ ಮಾಡಲು ಸುಖವಹುದೂ. ||

33. ವಿದ್ಯೆ.

(ದ್ವಿಪದಿ.)

ವಿದ್ಯೆಯನು ನೀನೀಗ ಗಳಿಸುವುದು ಶಿಶುವೆ! ।
ವಿದ್ಯೆಯನು ಕಲಿಯದವ ಬರಿ ಮೂಢ ಪಶುವೆ. ॥ ೧ ॥

ಕಲಿಯೊ ಚಿಕ್ಕಂದಿನಲಿ ವಿದ್ಯೆಗಳನೆಲ್ಲ; ।
ಎಳ ಗಿಡವು ಬಾಗುವೊಲ್ ಮರ ಮಣಿವುದಿಲ್ಲ. ॥ ೨ ॥

ಬರುವುದೈ ವಿದ್ಯೆಯಿಂದಲಿ ರೂಪ ಧನವು; ।
ಧರೆಯೊಳಗೆ ಜಾಣನಂ ಮನ್ನಿಪುದು ಜನವು. ॥ ೩ ॥

ವಿದ್ಯೆಯನು ಗಳಿಸು ಬಾಲಕನೆ ದಿನದಿನವು; ।
ವಿದ್ಯೆ ಸಾಧಿಸುವುದೇ ಜನ್ಮಕ್ಕೆ ಘನವು. ॥ ೪ ॥

Mangalore Canarese Readers, New Series.

THE FIRST STANDARD READER

THIRD EDITION, REVISED

ಕನ್ನಡ ಮೊದಲನೆಯ ಪಾಠಕ

ಮೊದಲನೆಯ ದರ್ಜೆಯ ಉಪಯೋಗಾರ್ಥವಾದುದು.

MANGALORE
BASEL MISSION BOOK AND TRACT DEPOSITORY
1906